# ಒಬ್ಬನೇ ದೇವರಿದ್ದಾನೆ

(THERE IS ONE GOD)




ಭಾ. ಚಂದುದಾಸ್

ದಿ ಕ್ರಿಸ್ಟಡೆಲ್ಫಿಯನ್ ಪ್ರೀಚಿಂಗ್ ಕಮಿಟಿ-ಇಂಡಿಯ
ಅಂಚೆ ಪೆಟ್ಟಿಗೆ 4237, ಬೆಂಗಳೂರು-560042, ಕರ್ನಾಟಕ

# ಒಬ್ಬನೇ ದೇವರಿದ್ದಾನೆ

## (THERE IS ONE GOD)

> **ಎಲ್ಲರಿಗೂ ತಂದೆಯಾಗಿರುವ ದೇವರು ಒಬ್ಬನೇ ; ಅತನು ಎಲ್ಲರ ಮೇಲಿರುವವನೂ....ಆಗಿದ್ದಾನೆ. ಎಫೆಸ 4 : 6.**

**ದೇವರ ಬಗ್ಗೆ ಕಲ್ಪನೆಗಳು :**

ಮಾನವ ಇತಿಹಾಸವನ್ನು ತೆಗೆದುಕೊಂಡಲ್ಲಿ ದೇವರ ಬಗ್ಗೆ ವಿವಿಧ ರೀತಿಯ ಅಭಿಪ್ರಾಯವನ್ನು ಹೊಂದಿರುವುದನ್ನು ನಾವು ಕಾಣುತ್ತೇವೆ. ಅನೇಕರು ದೇವರಿದ್ದಾನೆಂಬ ನಂಬಿಕೆಯನ್ನು ವ್ಯಕ್ತಪಡಿಸಿದರೂ, ಕೆಲವರು ದೇವರೇ ಇಲ್ಲ, ನಮ್ಮ ತೋಳ್ಬಲವೇ ದೇವರು ಎನ್ನುತ್ತಾರೆ. ದೇವರಿದ್ದಾನೆಂದು ಹೇಳುವವರಲ್ಲಿಯೂ ಸಹ ದೇವರ ಬಗ್ಗೆ ಸ್ಪಷ್ಟ ಅಭಿಪ್ರಾಯವನ್ನು ಹೊಂದಿರುವುದಿಲ್ಲ. ಅನೇಕರು ದೇವರನ್ನು ಮಾನವದೃಷ್ಟಿಯಲ್ಲಿ ಕಲ್ಪಿಸಿಕೊಂಡು ಆರಾಧಿಸುವವರಾಗಿದ್ದಾರೆ.

ನಂಬಿಕೆಗಳು ಬಹಳ ಮುಖ್ಯವಾದವುಗಳು. ದೇವರ ಬಗ್ಗೆ ನಂಬಿಕೆಗಳು ಎಲ್ಲಕ್ಕಿಂತ ಅತಿ ಮುಖ್ಯವಾದದ್ದು.

ಒಬ್ಬ ಮನುಷ್ಯನು ತನ್ನ ದೇವರನ್ನು ಯಾವ ರೀತಿಯಲ್ಲಿ ಕಲ್ಪಿಸಿಕೊಂಡಿರುತ್ತಾನೋ ಅದರಂತೆಯೇ ಅವನ ಕಲ್ಪನಾ ದೇವರೂ ಸಹ ಇರುತ್ತಾನೆ. ಯುದ್ಧಪ್ರೇಮಿ ಜನರು ಒಬ್ಬ ಯುದ್ಧಪ್ರೇಮಿ ದೇವರೊಂದಿಗೆ ಸೇರಿದ್ದನ್ನು ಗತಕಾಲದಲ್ಲಿ ನೋಡಬಹುದು. ಇಂದು ಅತಿಯಾಗಿ ಕ್ಷಮಿಸುವ ಒಬ್ಬ ದೇವರಲ್ಲಿ ನಂಬಿಕೆಯಿಟ್ಟಿರುವಾಗ, ಅದು ಅಂಕೆಯಿಲ್ಲದ (ಹತೋಟಿ ಮೀರಿದ) ಜನರಲ್ಲಿಗೆ ಇಲ್ಲವೇ ಸ್ವಾರ್ಥಪರ ಜೀವಿತದ ಜನರಲ್ಲಿಗೆ ಕೊಂಡೊಯ್ಯುತ್ತದೆ.

ಮತ್ತೊಂದು ಸಂಭವವಿದೆ. ದೇವರ ಬಗ್ಗೆ ಅನಿಶ್ಚಿತವಾಗಿರುವುದು. ಅನಿಶ್ಚಿತ ಕ್ರೈಸ್ತರನ್ನಾಗಿ ಮಾಡುತ್ತದೆ. ಹಾಗಿದ್ದಲ್ಲಿ ದೇವರ ಬಗ್ಗೆ ನಿಶ್ಚಿತವಾದ ನಂಬಿಕೆ

ಯನ್ನಿಡುವುದು ಹೇಗೆ ? ನಿಜವಾದ ದೇವರು ಯಾರು ಎಂಬುದನ್ನು ಅರಿಯು ವುದು ಹೇಗೆ ?

ಸೃಷ್ಟಿಕರ್ತನಾದ ದೇವರನ್ನು ಆತನ ಸೃಷ್ಟಿಯಾದ ಮಾನವನೇ ಸೃಷ್ಟಿಸು ವುದು ಹೇಗೆ ತಾನೇ ಸಾಧ್ಯ ? ಇಂದು ಲೋಕದಲ್ಲಿ ಅನೇಕ ರೀತಿಯ ಜನರು ತಮ್ಮದೇ ಆದ ಸ್ವಕಲ್ಪಿತ ದೇವರುಗಳನ್ನು ಸೃಷ್ಟಿಸಿ, ತಮ್ಮದೇ ಆದ ರೀತಿಯಲ್ಲಿ ಆರಾಧಿಸುವುದನ್ನು ನಾವು ಕಾಣುತ್ತೇವೆ. ವಿವಿಧ ರೀತಿಯ ಜನರು, ವಿವಿಧ ದೇವರುಗಳನ್ನು ವಿವಿಧ ರೀತಿಯಲ್ಲಿ ಆರಾಧಿಸುವುದನ್ನು ನೋಡುವಾಗ, ಒಬ್ಬನೇ ದೇವರಿದ್ದಾನೆಂಬ ನಂಬಿಕೆಗೆ ಅದು ಭಿನ್ನವಾಗಿಯೂ, ವಿರುದ್ಧವಾಗಿಯೂ, ತೋರುತ್ತದೆ. ಅಲ್ಲದೆ ವಿವಿಧ ರೀತಿಯ ದೇವರುಗಳು ಇದ್ದಾರೆಂಬ ಭಾವನೆಯನ್ನು ಪುಷ್ಟೀಕರಿಸುವಂತೆ ಕಾಣುತ್ತದೆ.

ಸೃಷ್ಟಿಕರ್ತನೂ ಪರಮಜ್ಞಾನಿಯೂ ಆದ ದೇವರು ತನ್ನ ಸೃಷ್ಟಿಯಾದ ಮಾನವನಿಗೆ ತನ್ನನ್ನು ಸರಿಯಾದ ರೀತಿಯಲ್ಲಿ ಪ್ರಕಟಿಸಿಕೊಳ್ಳಲಿಲ್ಲವೇ ? ಅಥವಾ ಪ್ರಕಟಿಸಿಕೊಳ್ಳಲು ಸಾಧ್ಯವಾಗಲಿಲ್ಲವೇ ? ಇಂದಿನ ಗೊಂದಲದ ಪರಿಸ್ಥಿತಿಯಲ್ಲಿ ಇಂತಹ ವಿವೇಚನಾರಹಿತ ಪ್ರಶ್ನೆಗಳು ಕೆಲವರಲ್ಲಿ ಏಳುವುದು ಸಹಜ. ಆದರೆ ಇವು ಅಂತಹವರ ಅಜ್ಞಾನವನ್ನು ಹೊರಗೆಡವುತ್ತದೆಯೇ ಹೊರತು ದೇವರ ಅಜ್ಞಾನ ವಾಗಲೀ ಅಸಹಾಯಕತೆಯನ್ನಾಗಲೀ ತೋರ್ಪಡಿಸುವುದಿಲ್ಲ. ಪರಮಜ್ಞಾನಿಯಾದ ದೇವರು ತನ್ನ ಸೃಷ್ಟಿಯಾದ ಮಾನವನಿಗೆ ತನ್ನನ್ನು ಸರಿಯಾದ ರೀತಿಯಲ್ಲಿಯೇ ಪ್ರಕಟ ಮಾಡಿದ್ದಾನೆ. ಆದರೆ ಮಾನವನು ಅದನ್ನು ಅರಿಯದೇ ಹೋಗಿದ್ದಾನೆ. ಮಾನವನ ಇತಿಹಾಸದ ಪ್ರಾರಂಭದಲ್ಲಿ ದೇವರು ತನ್ನನ್ನು ಅವನಿಗೆ ಪ್ರಕಟ ಮಾಡಿದ್ದಲ್ಲದೆ. ತನ್ನನ್ನು ಯಾವ ರೀತಿಯಲ್ಲಿ ಆರಾಧಿಸಬೇಕೆನ್ನುವುದನ್ನು ಸಹಾ ತಿಳಿಸಿದ್ದನು. ಕ್ರಮೇಣ ಮಾನವನು ಲೌಕಿಕ (ದೇಹದ) ಮೋಹಕ್ಕೆ ಒಳಗಾಗಿ, ತನ್ನ ಸತ್ಯದೇವರನ್ನು ಮರೆತು, ತನ್ನದೇ ಆದ ಸ್ವಕಲ್ಪಿತ ರೀತಿಯಲ್ಲಿ ತನಗೆ ಬೇಕೆನಿಸಿದ ದೇವರುಗಳನ್ನು ಸೃಷ್ಟಿಮಾಡಿ, ತನ್ನ ಮನಸ್ಸಿಗೆ ತೋರಿದಂತೆ ಆರಾಧಿಸಲು ಪ್ರಾರಂಭಿಸಿದನು. ಅಪೋಸ್ತಲನಾದ ಪೌಲನು ಬರೆಯುತ್ತಾನೆ, "ಅವರು ಸತ್ಯದೇವರನ್ನು ಬಿಟ್ಟು, ಅಸತ್ಯವಾದದ್ದನ್ನು ಹಿಡಿದುಕೊಂಡು ಸೃಷ್ಟಿಕರ್ತನನ್ನು ಪೂಜಿಸದೆ, ಸೃಷ್ಟಿವಸ್ತುಗಳನ್ನೇ ಪೂಜಿಸಿ, ಸೇವಿಸು ವವರಾದರು...." (ರೋಮಾಪುರ 1 : 25). "ದೇವರ ವಿಷಯವಾಗಿ ತಿಳಿಯ ಬಹುದಾದದ್ದು ಅವರ ಮನಸ್ಸಿಗೆ ಸ್ಪಷ್ಟವಾಗಿ ತಿಳಿದದೆ ; ಅದನ್ನು ಅವರಿಗೆ ದೇವರೇ ಸ್ಪಷ್ಟವಾಗಿ ತಿಳಿಸಿದನು. ಹೇಗೆಂದರೆ ಕಣ್ಣಿಗೆ ಕಾಣದಿರುವ ಆತನ ಗುಣ ಲಕ್ಷಣಗಳು ಅಂದರೆ ಆತನ ನಿತ್ಯಶಕ್ತಿಯೂ ದೇವತ್ವವೂ ಜಗದುತ್ಪತ್ತಿಗೆ ಮೊದಲ್ಗೊಂಡು ಆತನು ಮಾಡಿದ ಸೃಷ್ಟಿಗಳ ಮೂಲಕ ಬುದ್ಧಿಗೆ ಗೊತ್ತಾಗಿ

ಕಾಣಬರುತ್ತದೆ; ಹೀಗಿರುವುದರಿಂದ ಅವರು ಉತ್ತರವಿಲ್ಲದವರಾಗಿದ್ದಾರೆ. ಯಾಕಂದರೆ ದೇವರ ವಿಷಯವಾಗಿ ಅವರಿಗೆ ತಿಳುವಳಿಕೆಯಿದ್ದರೂ, ಅವರು ಆತನನ್ನು ದೇವರೆಂದು ಘನಪಡಿಸಲಿಲ್ಲ. ಆತನ ಉಪಕಾರಗಳನ್ನು ನೆನಸಿ ಆತನನ್ನು ಸ್ತುತಿಸಲಿಲ್ಲ." (ರೋಮಾ 1 : 19-21)

ಮಾನವ ಕಾರ್ಯಗಳಿಗೂ ದೇವರ ಕಾರ್ಯಗಳಿಗೂ ಹೋಲಿಸಿದಲ್ಲಿ ಮಹತ್ತರ ವ್ಯತ್ಯಾಸವನ್ನು ಕಾಣಬಹುದು. ಇವೆರಡು ಕಾರ್ಯಗಳನ್ನು ಬಹಳ ಸೂಕ್ಷ್ಮವಾದ ಪರಿಶೋಧನೆಗೆ ಒಳಪಡಿಸಿದಲ್ಲಿ, ಒಂದರಲ್ಲಿ ಕುಂದುಕೊರತೆಗಳನ್ನೂ ಅಪರಿಪೂರ್ಣತೆಯನ್ನೂ ಮತ್ತೊಂದರಲ್ಲಿ ಸೌಂದರ್ಯವನ್ನೂ ಪರಿಪೂರ್ಣತೆಯನ್ನೂ ಕಾಣಬಹುದು. ಉದಾಹರಣೆಗೆ, ಬಹಳ ನಯವಾಗಿ ಮಾಡಲ್ಪಟ್ಟ ಮಾನವ ನಿರ್ಮಿತ ಒಂದು ಸೂಜಿಯನ್ನು ಸೂಕ್ಷ್ಮದರ್ಶಕದಲ್ಲಿ (Microscope) ನೋಡಿದಲ್ಲಿ ಆ ಸೂಜಿಯಲ್ಲಿ ಅನೇಕ ಏರುಪೇರುಗಳೂ ಒರಟಾಗಿರುವುದೂ ಮತ್ತು ಅಸಮರ್ಪಕವಾಗಿರುವುದೂ ಕಂಡುಬರುತ್ತದೆ. ಅದೇ ಸೂಕ್ಷ್ಮದರ್ಶಕದಡಿಯಲ್ಲಿ ಅಡವಿಯ ಹೂವೊಂದನ್ನು ಇಟ್ಟು ನೋಡಿದಲ್ಲಿ ಅದರ ಸೌಂದರ್ಯ ಚೆಲುವು ಕಡಿಮೆಯಾಗುವ ಬದಲು ಬರೇ ಕಣ್ಣಿಗೆ ಮರೆಯಾಗಿದ್ದ ಇನ್ನೂ ಸೂಕ್ಷ್ಮವಾದ ಸೊಬಗನ್ನು ಕಾಣಬಹುದು. ಆ ಹೂವಿನ ಬಗ್ಗೆ ನಮ್ಮ ಭಾವನೆಯನ್ನು ಹೆಚ್ಚಿಸುತ್ತಾ ದೇವರ ವಾಕ್ಯದಲ್ಲಿ ಹೇಳಿರುವಂತೆ "ಅಡವಿಯಲ್ಲಿರುವ ಹೂವುಗಳನ್ನು ನೋಡಿರಿ–ಅವುಗಳಲ್ಲಿ ಒಂದಕ್ಕಿರುವಷ್ಟು ಅಲಂಕಾರವು ಅರಸನಾದ ಸೊಲೊಮೋನನಿಗೆ ಸಹ ಅವನು ತನ್ನ ಸಕಲ ವೈಭವದಿಂದಿರುವಾಗಲೂ ಇರಲಿಲ್ಲ." (ಮತ್ತಾಯ 6 : 28-29).

ಇಂದು ಮಾನವನು ವೈಜ್ಞಾನಿಕವಾಗಿ ಎಷ್ಟೇ ಮುಂದುವರೆದಿರಬಹುದು. ಆದರೂ ಸಹ, ತನ್ನ ಕಾರ್ಯಗಳಲ್ಲಿ ತಾನು ಉಂಟುಮಾಡಿದ ವಸ್ತುಗಳಲ್ಲಿ ಪರಿಪೂರ್ಣತೆಯನ್ನು ಕಾಣುವುದಿಲ್ಲ. ತನ್ನ ವೈಜ್ಞಾನಿಕ ಸಂಶೋಧನೆ ಹಾಗೂ ಅಭಿವೃದ್ಧಿಗೂ ದೇವರ ಸೃಷ್ಟಿ ವಸ್ತುಗಳನ್ನೇ ಅವಲಂಬಿಸಬೇಕು. ಪ್ರಥಮವಾಗಿ ಮಾನವನು ತಾನು ದೇವರ ಸೃಷ್ಟಿಯೆಂದು ಅರಿತಲ್ಲಿ ದೇವರ ಬಗ್ಗೆ ಎಲ್ಲವೂ ಸ್ಪಷ್ಟವಾಗುತ್ತವೆ. ಮಾನವ ಜ್ಞಾನದಿಂದ ಉತ್ಪಾದಿಸಲ್ಪಟ್ಟ ಅತ್ಯಂತ ಶ್ರೇಷ್ಠ ವಸ್ತುಗಳಲ್ಲಿಯೂ ಕುಂದುಕೊರತೆಗಳನ್ನು ಕಾಣಬಹುದು. ಹೋಲಿಕೆ ಮಾಡುವಾಗಲೂ ಇದೇ ತತ್ವವು ಅನ್ವಯಿಸುತ್ತದೆ. ಆದರೆ ದೇವರ ವಾಕ್ಯವನ್ನು ಹೆಚ್ಚು ಹೆಚ್ಚು ಪರಿಶೋಧನೆ ಮಾಡಿದಷ್ಟೂ ಹೆಚ್ಚು ಹೆಚ್ಚು ಸೂಕ್ಷ್ಮವಾಗಿ ಅಧ್ಯಯನ ಮಾಡಿದಷ್ಟೂ ಅದರ ಪರಿಪೂರ್ಣತೆಯನ್ನು ಸ್ಪಷ್ಟವಾಗಿ ಕಾಣಬಹುದು. ಪ್ರತಿದಿನವೂ ನೂತನ ಸೌಂದರ್ಯವು ಬೆಳಕಿಗೆ ಬರುತ್ತದೆ.

ಆದರೂ ಸಹ, ಮಾನವ ನಿರ್ಮಿತ ವಸ್ತುಗಳಿಂದ ನಮಗೇನು ತಿಳಿಯುತ್ತದೆ. ವಿಜ್ಞಾನದಲ್ಲಿ ಹೊಸತನ್ನು ಕಂಡುಹಿಡಿಯುವುದು, ಬುದ್ಧಿಜೀವಿಗಳ ಸಂಶೋಧನೆ, ನಾಸ್ತಿಕರ ಶ್ರಮ—ಇವೆಲ್ಲವೂ ಒಟ್ಟಾಗಿ ದೈವೀಕ ಸೌಂದರ್ಯವನ್ನು ಹೊರಗೆಡವುತ್ತವೆ. ಇದು ಸತ್ಯವೇದದ ಸಾಮಾನ್ಯ ಸ್ವರೂಪವಾದಲ್ಲಿ ಪ್ರವಾದನಾ ವಾಕ್ಯಗಳು ಇವುಗಳಿಗಿಂತ ವಿಶೇಷವಾದವುಗಳಾಗಿವೆ.

ಮಾನವ ಇತಿಹಾಸವನ್ನು ನಾವು ಅವಲೋಕಿಸಿದಲ್ಲಿ, ಮಾನವನು ತನ್ನ ಸೃಷ್ಟಿಕರ್ತನೂ ಒಬ್ಬನೇ ಸತ್ಯದೇವರೂ ಆಗಿರುವ ದೇವರನ್ನು ಆರಾಧಿಸುವುದನ್ನು ಬಿಟ್ಟು ಹೇಗೆ ಇತರೆ ಸೃಷ್ಟಿವಸ್ತುಗಳನ್ನು ಪೂಜಿಸಲು ತೊಡಗಿದನೆಂದು ತಿಳಿಯಬಹುದು. ಪ್ರಥಮ ಮಾನವನಾದ ಆದಾಮನನ್ನು ದೇವರು ಈ ಲೋಕದ ಮೇಲೆ ಸೃಷ್ಟಿ ಮಾಡಿದಂದಿನಿಂದಲೇ ತನ್ನನ್ನು ಅವನಿಗೆ (ಆದಾಮನಿಗೆ) ಪ್ರಕಟಿಸಿಕೊಂಡಿದ್ದನು. ಆದರೆ ಮಾನವನು ಕ್ರಮೇಣ ತನ್ನ ಹೃದಯದಲ್ಲಿ ಕೆಟ್ಟದ್ದನ್ನು ತುಂಬಿಕೊಂಡು ನಿಜ ದೇವರಿಂದ ದೂರವಾಗಿ ತನ್ನದೇ ಆದ ಸ್ವಕಲ್ಪಿತ ರೀತಿಯಲ್ಲಿ ಸೃಷ್ಟಿಯ ವಸ್ತುಗಳನ್ನೇ ದೇವರುಗಳೆಂದು ಪೂಜಿಸಲು ತೊಡಗಿದನು. (ರೋಮಾಪುರ 1:25). ಅನೇಕ ಸಂದರ್ಭಗಳಲ್ಲಿ ಮಾನವನು ತನಗಿಂತ ಒಬ್ಬ ಬಲಶಾಲಿಯಾದ ಮತ್ತೊಬ್ಬ ಮಾನವನನ್ನೇ ದೇವರೆಂದು ಪೂಜಿಸ ತೊಡಗಿದನು.

ನಾವು ಚರಿತ್ರೆಯನ್ನು ಓದಿದಲ್ಲಿ ಅನೇಕ ಪ್ರಾಚೀನ ಜನಾಂಗಗಳವರು ಅಂದರೆ — ಬಾಬಿಲೋನಿಯನ್ನರು, ಅಸ್ಸೀರಿಯನ್ನರು, ಐಗುಪ್ತರು, ಪರ್ಷಿಯನ್ನರು, ಮೇದ್ಯರು, ಆರ್ಯರು, ಗ್ರೀಕರು, ರೋಮನ್ನರು, ಇವರುಗಳು ಒಬ್ಬನೇ ಸತ್ಯದೇವರನ್ನು ಬಿಟ್ಟು ಸೃಷ್ಟಿವಸ್ತುಗಳನ್ನೇ ಪೂಜಿಸಲು ತೊಡಗಿದರು. ಐಗುಪ್ತ್ಯರು ಮತ್ತು ಗ್ರೀಕರು ಈ ವಿಧವಾದ ಆರಾಧನೆಯನ್ನು ಬಾಬಿಲೋನಿಯಾದ ಕಲ್ದೀಯರಿಂದ ಕಲಿತರೆಂದು ಅನೇಕ ಚರಿತ್ರಕಾರರು ಅಭಿಪ್ರಾಯಪಡುತ್ತಾರೆ.

ಈ ಬಾಬಿಲೋನಿಯನ್ನರು ತಮ್ಮ ದೈನಂದಿನ ಆಗುಹೋಗುಗಳಲ್ಲಿ ಪ್ರಭಾವ ಬೀರುತ್ತಿದ್ದ ಸೃಷ್ಟಿವಸ್ತುಗಳನ್ನೇ ತಮ್ಮ ದೇವರುಗಳೆಂದು ಪೂಜಿಸುತ್ತಿದ್ದರು. ಆದರೂ ಈ ಎಲ್ಲಾ ದೇವರುಗಳ ಮೇಲೆ ಮತ್ತೊಬ್ಬ ಶ್ರೇಷ್ಠ ದೇವರಿದ್ದಾನೆಂದು ಅವರು ನಂಬಿದ್ದರು. ಐಗುಪ್ತರು ಆರಾಧಿಸುತ್ತಿದ್ದ ದೇವರುಗಳು :





1. Baby offered to Molech

2. OSRIS


2. ಆಸ್‌ರಿಸ್ (OSRIS) : ನೀರಿನ ಹಾಗೂ ಸಸ್ಯಗಳ ದೇವತೆ, ನೈಲ್ ನದಿಯು ಪ್ರವಾಹ ತುಂಬಿ ಹರಿಯುವುದೇ ಈ ದೇವತೆಯು ಪ್ರತಿವರ್ಷವೂ ಹೊಸದಾಗಿ ಹುಟ್ಟುವುದೆಂದಾಗಿತ್ತು. (ವಿಮೋಚನಾಕಾಂಡ 7 : 17 : 8 : 4–5 ನ್ನು ಓದಿರಿ.)




3. ನೆಫ್ತಿಸ್ (NEPHTHYS) ಮನೆ ದೇವತೆ (HEQT) ಎಂದೂ ಕರೆಯಲಾಗುತ್ತಿತ್ತು. ಈ ದೇವತೆಗೆ ಅರ್ಧ ಕಪ್ಪೆ ಅರ್ಧ ಸ್ತ್ರೀ ಶರೀರವಿತ್ತೆಂದು ನಂಬಿದ್ದರು. ಈ ದೇವತೆಯು ಫಲವತ್ತತೆಯ ದೇವತೆಯಾಗಿತ್ತು. (ವಿಮೋಚನಾಕಾಂಡ 8 : 3 ನ್ನು ಓದಿರಿ.)



4. ಹಾಥೋರ್ (HATHOR) : ಪ್ರೇಮ, ಸಂತೋಷ ಮತ್ತು ಸಂಗೀತ ದೇವತೆ.



5. ಗೆಬ್ (GEB) ಭೂ ದೇವತೆ (ಮನುಷ್ಯನನ್ನು ಧೂಳಿನಿಂದ ಮಾಡಿದ ದೇವತೆಯೆಂದು ಹೇಳಲಾಗಿದೆ. (ವಿಮೋಚನಾಕಾಂಡ 8 : 17)




6. ಕೆಫೆರಾ (KEPERA) : ಕೀಟಗಳ ಅಧಿದೇವತೆ (ವಿಮೋಚನಾಕಾಂಡ 8 : 21)



7. Egyptian Sun Image




8. ಸೆತ್ (SETH) : ಚಂಡಮಾರುತದ ದೇವತೆ (ವಿಮೋಚನಾ ಕಾಂಡ 9 : 19).



9. ನಟ್ (NUT) ಪರಲೋಕದ ದೇವತೆ



10. ಇಂಪ್ಹೋಟೆಪ್ (IMHOTEP) :
ಆರೋಗ್ಯದೇವತೆ
(ವಿಮೋಚನಾಕಾಂಡ 9:9)








11. —ರಾ (RA) ಸೂರ್ಯದೇವ :

12. ತೋತ್ (THOTH) ಚಂದ್ರದೇವ

(ವಿಮೋಚನಾ ಕಾಂಡ 11 : 22–23).



13,. ಐಸಿಸ್ (ISIS)—ಮಕ್ಕಳ ರಕ್ಷಕ ದೇವತೆ. ರೆ (RE)—ಸೃಷ್ಟಿಯ ದೇವತೆ.
(ವಿಮೋಚನಾ ಕಾಂಡ 11 : 5)



14. **Egyptian priest–king carried in procession.**
ಐಗುಪ್ತದ ಅರಸನಾದ ಫರೋಹನನ್ನು ಒಬ್ಬ ದೇವರೆಂದು ಪರಿಗಣಿಸಲಾಗುತ್ತಿತ್ತು

ಹೀಗೆ ಒಂದೊಂದು ವಿಷಯಕ್ಕೂ ಒಬ್ಬೊಬ್ಬ ದೇವತೆಗಳನ್ನು ಹೆಸರಿಸಿ, ಪೂಜಿಸುತ್ತಿದ್ದರು. ಇದೇ ರೀತಿಯಾದ ಭಾವನೆಗಳು ಲೋಕದ ಇತರೇ ಜನಾಂಗಗಳಿಗೂ ಹಬ್ಬಿತು. ಯಾಕಂದರೆ ಕಲ್ಡೀಯ ಜನರು (ಮೆಸೊಪೊಟೋಮಿಯಾ ಪ್ರದೇಶದವರು) ನಾಗರೀಕತೆಯಲ್ಲಿಯೂ ಗಣಿತಶಾಸ್ತ್ರ ಖಗೋಳಶಾಸ್ತ್ರಗಳಲ್ಲಿಯೂ ಬಹಳ ಮುಂದುವರೆದಿದ್ದರು. ಐಗುಪ್ತದವರು ಈ ವಿದ್ಯೆಗಳನ್ನು ಅವರಿಂದ ಕಲಿಯುವಾಗ ಅವರ ಮತೀಯ ಆರಾಧನೆಗಳನ್ನೂ ತಮ್ಮ ದೇಶಕ್ಕೆ ತಂದರೆಂದು ಚರಿತ್ರಕಾರರು ಅಭಿಪ್ರಾಯಪಡುತ್ತಾರೆ. ಗ್ರೀಕರು, ಫಿನೀಷಿಯನ್ನರು ಈ ಮತೀಯ ಆರಾಧನೆಯನ್ನು ಐಗುಪ್ತರಿಂದ ಪಡೆದರು. ಕಾಲಕ್ರಮೇಣ ದೇವರಿಂದ ದೂರವಾದ ಮಾನವ ಜನಾಂಗ, ಈ ರೀತಿಯಾಗಿ ಬೇರೆ ಬೇರೆ ಹೆಸರಿನ ಅನೇಕ ದೇವರುಗಳನ್ನು ಆರಾಧಿಸಲು ಕಾರಣವೇನು? ಪ್ರಕೃತಿಯಲ್ಲಿ ನಡೆಯುತಕ್ಕ ಪ್ರತಿಯೊಂದು ಕಾರ್ಯಗಳ ಹಿಂದೆ ಒಂದು ಶಕ್ತಿಯಿದೆ ಎಂದು ಭಾವಿಸಿದನು. ಅದೇ ಅವನಿಗೆ ದೇವರಾಯಿತು. ಅವನ ಜೀವನದ ಒಂದೊಂದು ವ್ಯಾಪಾರವೂ ಆಶ್ಚರ್ಯವನ್ನೂ ಭಯವನ್ನೂ ಆತನ ಹೃದಯದಲ್ಲಿ ಉಂಟು ಮಾಡುತ್ತಿದೆ. ಪ್ರಕೃತಿಯ ಒಂದೊಂದು ರೂಪವೂ ಆತನಿಗೆ ಸಹಾಯಕವಾಗಿಯೋ ವಿರೋಧವಾಗಿಯೋ ಇರುತ್ತಾ, ಆತನ ಮನಸ್ಸಿನಲ್ಲಿ ಒಂದು ಧೈರ್ಯವನ್ನೋ, ಭೀತಿಯನ್ನೋ ಉತ್ಪತ್ತಿ ಮಾಡಿದೆ. ಭೂಮಿ ಮಳೆ ಬೆಳೆಗಳನ್ನು ಬೆಳೆದು ಆತನಿಗೆ ಸಹಾಯ ಮಾಡಿದೆ. ಆದುದರಿಂದ ಅವು ಸಹಾಯಕಗಳು. ಬಿರುಗಾಳಿಯ ರಭಸ, ಗುಡುಗು ಸಿಡಿಲುಗಳ ಆರ್ಭಟ ಅವನನ್ನು ನಡುಗಿಸಿವೆ. ಆದುದರಿಂದ ಅವು ಭಯಾನಕಗಳು. ಸೂರ್ಯನು ಬೆಳಗುವಷ್ಟು ಕಾಲವೂ ಎಲ್ಲ ಜೀವಿಗಳೂ ಧೈರ್ಯವಾಗಿ ತಮ್ಮ ತಮ್ಮ ಕೆಲಸಗಳನ್ನು ಮಾಡಿಕೊಂಡು, ಕತ್ತಲೆ ಬಂದೊಡನೆಯೇ ತಮ್ಮ ಗೂಡುಗಳಿಗೆ ಹೋಗಿ ಸೇರಿಕೊಳ್ಳುವುದೂ ಸಹ ಆಗಿನ ಜನರ ಮನಸ್ಸಿನಲ್ಲಿ ದೊಡ್ಡ ಪರಿಣಾಮವನ್ನುಂಟುಮಾಡಿರಬೇಕು. ಕಪ್ಪು, ಕೆಂಪು ಹಸುಗಳು ಬಿಳಿಯ ಹಾಲನ್ನು ಕೊಡುವುದೆಂದರೆ ಆಶ್ಚರ್ಯ! ರಾತ್ರಿಯಲ್ಲಿ ಮಿನುಗುವ ನಕ್ಷತ್ರಗಳೆಲ್ಲ ಹಗಲಿನಲ್ಲಿ ಎಲ್ಲಿರುವುವು? ಸ್ವಚ್ಛವಾದ ನೀರುಳ್ಳ ನದಿಗಳೆಲ್ಲ ಸಮುದ್ರಕ್ಕೆ ಸೇರಿದರೂ ಸಮುದ್ರ ಏಕೆ ತುಂಬಿ ಕೋಡಿ ಹರಿಯುವುದಿಲ್ಲ? ಹೀಗೆ ಒಂದೊಂದು ವ್ಯಾಪಾರವೂ ಆಶ್ಚರ್ಯ ಭಯ ಶಂಕೆಗಳಿಂದ ಆಗಿನ ಜನರನ್ನು ತುಂಬಿರಬೇಕು : ಅವರು ಒಂದೊಂದಕ್ಕೂ ಕಾರಣವನ್ನೋ ನಿವಾರಣೆಯನ್ನೋ ಕಂಡುಹಿಡಿಯಲು ಯತ್ನಿಸಿ, ಸತ್ಯವನ್ನು ಅರಿಯಲಾಗದೆ (ಕಾರಣ : ನಿಜವಾದ ದೇವರಿಂದ ದೂರವಾಗಿದ್ದರು) ತಮ್ಮದೇ ಆದ ಕಲ್ಪನೆಯಿಂದ ಒಂದೊಂದು ವ್ಯಾಪಾರಕ್ಕೂ ಒಬ್ಬೊಬ್ಬ ವ್ಯಕ್ತಿ ನಿಯಾಮಕನಾಗಿದ್ದಿರಬಹುದೆಂದು ಭಾವಿಸಿದರು.

## ಸತ್ಯದೇವರು ಯಾರು ?

ಸತ್ಯದೇವರು ಯಾರು ? ಅವನನ್ನು ಕಂಡುಹಿಡಿಯುವುದು ಹೇಗೆ ? ದೇವರ ಮಗನಾದ ಯೇಸುಕ್ರಿಸ್ತನು ದೇವರ ಬಗ್ಗೆ ಏನು ಹೇಳಿದ್ದಾನೆಂದು ನೋಡೋಣ. "ದೇವರು ಆತ್ಮಸ್ವರೂಪನು ; ಆತನನ್ನು ಆರಾಧಿಸುವವರು-ಆತ್ಮೀಯ ರೀತಿಯಲ್ಲಿ ಸತ್ಯಕ್ಕೆ ತಕ್ಕ ಹಾಗೆ ಆರಾಧಿಸಬೇಕು." (ಯೋಹಾನ 4:24). ಯೇಸು ಕ್ರಿಸ್ತನ ಮಾತುಗಳು ನಿಜಕ್ಕೂ ಆಹ್ವಾನಕರವಾಗಿದೆ. ಯಾರು ದೇವರನ್ನು ಆತ್ಮೀಯ ರೀತಿಯಲ್ಲಿ ಸತ್ಯಕ್ಕೆ ತಕ್ಕ ಹಾಗೆ ಆರಾಧಿಸುತ್ತಾರೋ ಅಂತಹವರಲ್ಲಿ ದೇವರು ಸುಪ್ರೀತನಾಗುತ್ತಾನೆ. ಯಾರು ದೇವರ ಬಗ್ಗೆ ಸತ್ಯವನ್ನು ಹುಡುಕಿ ಅದನ್ನು ತಮ್ಮ ಆತ್ಮೀಯ ಜೀವಿತದ ತಳಹದಿಯನ್ನಾಗಿ ಮಾಡಿಕೊಳ್ಳುತ್ತಾರೋ ಅಂತಹವರು ಮಾತ್ರ ದೇವರನ್ನು ಸತ್ಯಕ್ಕೆ ತಕ್ಕ ಹಾಗೆ ಆರಾಧಿಸುವವರಾಗಿದ್ದಾರೆ. ತನ್ನನ್ನು ಆರಾಧಿಸುವ ರೀತಿಯನ್ನು ನೇಮಕ ಮಾಡುವುದು ದೇವರ ಅಧಿಕಾರಕ್ಕೊಳಪಟ್ಟಿರುತ್ತದೆ. ಇದನ್ನು ಯಾರೂ ಅಲ್ಲಗೆಳೆಯುವಂತಿಲ್ಲ. ಏಕೆಂದರೆ ದೇವರ ಸಾರ್ವಭೌಮತ್ವವನ್ನು ಒಪ್ಪಿಕೊಂಡ ನಂತರ, ಆತನನ್ನು ಆರಾಧಿಸುವ ರೀತಿಯೂ ಸಹ ಅವನದೇ ಆಗಿರುತ್ತದೆ. ಲೋಕದ ಆಡಳಿತವನ್ನು ನೋಡುವಾಗ ಸಾಮಾನ್ಯ ಪ್ರಜೆಯಿಂದ ಮೊದಲ್ಗೊಂಡು ರಾಷ್ಟ್ರದ ಉಚ್ಚನಾಯಕನೂ ಸಹ ರಾಜ್ಯದ ಕಾನೂನುಗಳಿಗೆ ಒಳಪಡಬೇಕಾಗುತ್ತದೆ. ಉದಾಹರಣೆಗೆ—ವಾಹನ ಚಾಲನೆಗಳ ಬಗ್ಗೆ ನೋಡುವುದಾದರೆ, ಆ ಯಂತ್ರದ ಒಂದು ನಿಯಮಕ್ಕೆ ಒಳಪಡದಿದ್ದಲ್ಲಿ ಆ ಯಂತ್ರವನ್ನು ಚಾಲನೆ ಮಾಡಲು ಸಾಧ್ಯವಿರುವುದಿಲ್ಲ. ನಿಯಮವನ್ನು ಮೀರಿ ಬೇರೆ ರೀತಿಯಲ್ಲಿ ಚಾಲನೆ ಮಾಡಲು ಪ್ರಯತ್ನಿಸಿದಲ್ಲಿ ಯಂತ್ರವು ಹಾಳಾಗಬಹುದು. ಜೊತೆಗೆ ಚಾಲಕನಿಗೂ ಅಪಾಯ ಒದಗಬಹುದು. ಹಾಗೆಯೇ ವಾಹನ ಸಂಚಾರ ನಿಯಮಗಳಿಗೂ ಸಹ ಪ್ರತಿಯೊಬ್ಬರೂ ಒಳಪಡಬೇಕಿರುತ್ತದೆ. ಇಲ್ಲದಿದ್ದಲ್ಲಿ ಅಪಘಾತಗಳು ಸಂಭವಿಸಿ ತಾನೂ ಅಪಾಯಕ್ಕೀಡಾಗುವುದಲ್ಲದೆ ಇತರರನ್ನೂ ಅಪಾಯಕ್ಕೀಡು ಮಾಡುವ ಸಂಭವವಿರುತ್ತದೆ. ಅಲ್ಲದೆ ಕಾನೂನು ರೀತ್ಯ ಶಿಕ್ಷೆಗೆ ಬದ್ಧರಾಗಬೇಕಾಗುತ್ತದೆ.

ಲೋಕದ ರೀತಿಯಲ್ಲಿಯೇ ಇಷ್ಟೊಂದು ನಿಯಮಗಳು ಹಾಗೂ ಅದಕ್ಕೆ ಒಳಪಡಬೇಕಾಗುವ ನಿರ್ಬಂಧವಿರುವಲ್ಲಿ ಸರ್ವಶಕ್ತನೂ ಸೃಷ್ಟಿಕರ್ತನೂ ಆದ ದೇವರಿಗೆ ನಾವು ಎಷ್ಟೊಂದು ಗೌರವ ಕೊಡಬೇಕಾಗುತ್ತದೆ. ಆತನ ನಿಯಮಗಳಿಗೆ ನಾವು ಒಳಪಡಬೇಕಾದುದು ನಮ್ಮ ಕರ್ತವ್ಯವಲ್ಲವೇ ? ಆದ್ದರಿಂದ ದೇವರು ತನ್ನನ್ನು ಪ್ರಕಟಿಸಿಕೊಂಡಿರುವ ಸತ್ಯವೇದವನ್ನು ಎಚ್ಚರಿಕೆಯಿಂದ ಹುಡುಕಬೇಕಾದ

ಮತ್ತು ಅದನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕಾದ ಹೊಣೆಯು ಮಾನವರದ್ದಾಗಿರುತ್ತದೆ. ದೇವರನ್ನು ಮೆಚ್ಚಿಸಬೇಕಾದವರು ಇದನ್ನು ಮಾಡಲೇಬೇಕು.

ಮತ್ತೊಂದು ಸಾರಿ ಏಸುಕ್ರಿಸ್ತನು ಹೇಳಿದನು, "ಒಬ್ಬನೇ ಸತ್ಯದೇವರಾಗಿರುವ ನಿನ್ನನ್ನೂ ನೀನು ಕಳುಹಿಸಿಕೊಟ್ಟ ಯೇಸುಕ್ರಿಸ್ತನನ್ನೂ ತಿಳಿಯುವುದೇ ನಿತ್ಯಜೀವವು" (ಯೋಹಾನ 17:3). ಪೌಲನು ಹೇಳುತ್ತಾನೆ, "ಆದರೆ ನಂಬಿಕೆಯಿಲ್ಲದೆ ದೇವರನ್ನು ಮೆಚ್ಚಿಸುವುದು ಅಸಾಧ್ಯ. ದೇವರ ಬಳಿಗೆ ಬರುವವನು ದೇವರು ಇದ್ದಾನೆ, ಮತ್ತು ತನ್ನನ್ನು ಹುಡುಕುವವರಿಗೆ ಪ್ರತಿಫಲವನ್ನು ಕೊಡುತ್ತಾನೆ ಎಂದು ನಂಬುವುದು ಅವಶ್ಯ" (ಇಬ್ರಿಯ 11:6). ಅಂದರೆ ಮಾನವನು ರಕ್ಷಣೆ ಹೊಂದಬೇಕಾದಲ್ಲಿ ಒಬ್ಬನೇ ಸತ್ಯದೇವರನ್ನು ತಿಳಿಯುವುದು ಅತ್ಯವಶ್ಯವಾಗಿದೆ.

ಇಂದು ಮಾನವರು ದೇವರನ್ನು ಎಷ್ಟರಮಟ್ಟಿಗೆ ಅರಿತಿದ್ದಾರೆ? ಅವರ ಅರಿವು ಅಥವಾ ದೇವರ ಬಗ್ಗೆ ತಿಳುವಳಿಕೆ ಸತ್ಯವೇದದ ಸತ್ಯಕ್ಕೆ ಅನುಸಾರವಾಗಿದೆಯೋ? ಇಂದು ಮಾನವನು ತನ್ನದೇ ಕಲ್ಪನೆಯಿಂದ ಮಾಡಿದ ಸಹಸ್ರಾರು ದೇವರುಗಳನ್ನು ಪೂಜಿಸುತ್ತಿದ್ದಾನೆ. ಇಂದು ಅನೇಕ ಮತಗಳು "ತ್ರಯೈಕತ್ವ" "ತ್ರಿಮೂರ್ತತ್ವ" ಎಂಬ ಕಲ್ಪನೆಯನ್ನು ಬೋಧಿಸುತ್ತಿವೆ. ಈ "ತ್ರಯೈಕತ್ವ" ಬೋಧನೆಯು ಅಥವಾ ನಂಬಿಕೆಯು ಸತ್ಯವೇದದ್ದಲ್ಲ. ಇದು ಪುರಾತನ ಬಾಬಿಲೋನಿಯನ್ನರ ನಂಬಿಕೆ. ಸೆಮಿರಾಮಿಸ್ – ತಾಯಿ, ಆಕೆಯ ಗಂಡ ಸೂರ್ಯ, ಅವಳ ಮಗ ತಮ್ಮೂಜ್–ಈ ಮೂರು ವ್ಯಕ್ತಿಗಳು – ತಂದೆ, ತಂದೆಯ ಶಕ್ತಿಯು ತಾಯಿಯ ರೂಪದಲ್ಲಿ ಅವತರಿಸಿ, ಮಗನನ್ನು ಹಡೆದ ನಂತರ ಮತ್ತೆ ತಂದೆಯಂತೆಯೇ ಆಗಿ ಆತನೊಂದಿಗೆ ಜೀವಿಸಲು ಹಿಂದಿರುಗುತ್ತಾಳೆ. ಇದು ಬಾಬಿಲೋನಿಯನ್ನರ "ತ್ರಯೈಕ" ದೇವರ ಕಲ್ಪನೆ ಹಾಗೂ ನಂಬಿಕೆಯಾಗಿತ್ತು. ಈ ಕಲ್ಪನೆಯೇ ಪ್ರಾಚೀನ ರೋಮನ್ ಕ್ಯಾಥೊಲಿಕ್ ಸಭೆಯಲ್ಲಿ ತ್ರಯೈಕತ್ವದ ಬೋಧನೆಯಾಯಿತು. ಜಪಾನಿನಲ್ಲಿಯೂ ಮೂರು ತಲೆಗಳಿರುವ ಬುದ್ಧನನ್ನು ಪೂಜಿಸುತ್ತಿದ್ದರು.

ಸಾನ್ ಪವೋ ಫು (SAN PAO PHU) ಪ್ರಾಚೀನ ರೋಮ್‌ನಲ್ಲಿ–ಜ಼ಿಯೂಸ್, ಫಾರ್ಚುನ ಮತ್ತು ಜ್ಯೂಪಿಟರ್ – ಪ್ಯೂರ್ – ಅವರ ಮಗ (ZEOS, FORTUNA and JUPITER PEUR).

ಆದರೆ ಕ್ರೈಸ್ತರಲ್ಲಿ ಅನ್ಯಜನಾಂಗದ ಈ ನಂಬಿಕೆಯು ಹೇಗೆ ನುಗ್ಗಿತು ಎಂಬುದನ್ನು ನೋಡೋಣ. ಕ್ರೈಸ್ತಸಭಾ ಚರಿತ್ರೆ (CHURCH HISTORY) ಯನ್ನು ಓದಿದಲ್ಲಿ ಈ ಸಂಗತಿಯು ಸ್ಪಷ್ಟವಾಗುತ್ತದೆ.



SEMIRAMS & TAMMUZ



TAMMUZ



ISIS & HORUS



ಜ್ಯೂಪಿಟರ್ – ಪ್ಯೂರ್

ಈಗ ನಾವು ಸತ್ಯವೇದಕ್ಕೆ ಬರೋಣ. ಪ್ರಥಮ ಪುಸ್ತಕವಾದ ಆದಿಕಾಂಡದಲ್ಲಿ ದೇವರು ಆದಾಮನನ್ನೂ ಹವ್ವಳನ್ನೂ ಉಂಟುಮಾಡಿದ ನಂತರ ಆದಾಮನ ಸಂತತಿಯಲ್ಲಿ ಹುಟ್ಟಿದ ಅನೇಕರು ಅಂದರೆ ಹೇಬೇಲ, ಸೇಥ, ಹನೋಕ, ನೋಹ ಮುಂತಾದವರು ದೇವರ ಪ್ರೀತಿಗೆ ಪಾತ್ರರಾಗಿದ್ದರು, ಎಂದು ನಾವು ನೋಡುತ್ತೇವೆ. ಇದು ಹೇಗೆ ಸಾಧ್ಯವಾಯಿತು ? ದೇವರು ಮಾನವನಿಗೆ

ತನ್ನನ್ನು ಪ್ರಕಟಿಸಿಕೊಳ್ಳದೆ ತನ್ನನ್ನು ಆರಾಧಿಸುವ ರೀತಿಯನ್ನು ಹೇಳದೇ ಇದ್ದಲ್ಲಿ, ಮಾನವರು ಹೇಗೆ ತಾನೇ ದೇವರ ಮೆಚ್ಚುಗೆಗೆ ಪಾತ್ರರಾಗಲು ಸಾಧ್ಯ ? "ಹನೋಕನು ದೇವರೊಂದಿಗೆ ನಡೆದನು" ಎಂದು ಓದುತ್ತೇವೆ (ಆದಿಕಾಂಡ 5:24). ನೋಹನೂ ಸಹ ದೇವರೊಂದಿಗೆ ಅನ್ಯೋನ್ಯವಾಗಿ ನಡೆದನು ಎಂದು ತಿಳಿಸಿದೆ (ಆದಿಕಾಂಡ 6:9). ಆದ್ದರಿಂದ ಆದಿಯಲ್ಲಿಯೇ ಪ್ರಥಮ ಮಾನವ ನನ್ನು ಸೃಷ್ಟಿಮಾಡಿದಂದಿನಿಂದಲೇ ದೇವರು ತನ್ನನ್ನು ಪ್ರಕಟಿಸಿಕೊಂಡು, ಅವರು ತನ್ನನ್ನು ಆರಾಧಿಸುವ ರೀತಿಯನ್ನು ತಿಳಿಸಿದ್ದಾನೆ ಎಂಬುದು ಸ್ಪಷ್ಟವಾಗಿದೆ. ನಂತರ ಅಬ್ರಹಾಮನ ಮೂಲಕ ಉಂಟಾದ ಇಸ್ರಾಯೇಲ್ಯರಿಗೆ ಮೋಶೆಯ ಮೂಲಕವೂ ಸಹ ಹೇಳಿಸಿದ್ದಾನೆ. "ದೇವರು ಮುಂದಣ ಆಜ್ಞೆಗಳನ್ನೆಲ್ಲಾ ಕೊಟ್ಟನು – ಯೆಹೋವನು ಎಂಬ ನಿನ್ನ ದೇವರು ನಾನೇ. ನಾನಲ್ಲದೆ ನಿನಗೆ ಬೇರೆ ದೇವರುಗಳು ಇರಬಾರದು. ಯಾವ ಮೂರ್ತಿಯನ್ನೂ ಮಾಡಿಕೊಳ್ಳ ಬಾರದು. ಆಕಾಶದಲ್ಲಾಗಲೀ ಭೂಮಿಯಲ್ಲಾಗಲೀ ಇರುವ ಯಾವುದರ ರೂಪವನ್ನೂ ಮಾಡಿಕೊಳ್ಳಬಾರದು. ಅವುಗಳಿಗೆ ಅಡ್ಡಬೀಳಲೂ ಬಾರದು. ಪೂಜೆ ಮಾಡಲೂ ಬಾರದು. ನಿನ್ನ ದೇವರಾದ ಯೆಹೋವನೆಂಬ ನಾನು ನನಗೆ ಸಲ್ಲತಕ್ಕ ಗೌರವವನ್ನು ಮತ್ತೊಬ್ಬನಿಗೆ ಸಲ್ಲಗೊಡಿಸುವುದಿಲ್ಲ". (ವಿಮೋಚನ ಕಾಂಡ 20:1-5). ಇಸ್ರಾಯೇಲ್ಯರು ಒಬ್ಬನೇ ದೇವರನ್ನು ಆರಾಧಿಸುತ್ತಿದ್ದರು. ಆ ಒಬ್ಬ ದೇವರೇ ಎಲ್ಲಾ ನೈತಿಕತೆಗೂ ಪರಿಶುದ್ಧತೆಗೂ ಮೂಲವಾಗಿದ್ದಾನೆ. ಇಸ್ರಾಯೇಲ್ ಪ್ರವಾದಿಗಳಿಂದ ಅವರ ಕಾಲದ ಸಾಮಾಜಿಕ ಪಿಡುಗುಗಳು ಅಂದರೆ ಐಶ್ವರ್ಯವಂತರಿಂದ ಬಡವರ ಮೇಲೆ ದಬ್ಬಾಳಿಕೆ, ನ್ಯಾಯಾಸನಗಳ ಅನ್ಯಾಯ ತೀರ್ಪುಗಳು, ನೆರೆಯವರ ಬಗ್ಗೆ ಚಿಂತೆಯಿಲ್ಲದಿರುವುದು – ಇವುಗಳ ಖಂಡನೆಯು ದೇವರಲ್ಲಿ ಅವರು ಇಟ್ಟಿದ್ದ ಏಕತೆ, ಪವಿತ್ರತೆ ಹಾಗೂ ನೀತಿಯ ನಂಬಿಕೆಯ ಮೇಲೆ ಆಧಾರಗೊಂಡಿತ್ತು. "ನಾನೇ ಯೆಹೋವ, ಇನ್ನು ಯಾವನೂ ಅಲ್ಲ. ನಾನು ಹೊರತು ಯಾವ ದೇವರೂ ಇಲ್ಲ........ (ಯೆಶಾಯ 45:5).

ಕ್ರಿ. ಶ. 132 ರಲ್ಲಿ ಯೆಹೂದ್ಯರು ರೋಮನ್ನರ ದಬ್ಬಾಳಿಕೆಯ ವಿರುದ್ಧ ದಂಗೆಯೆದ್ದರು. ಹೇಡ್ರಿಯಾನ್ ಚಕ್ರವರ್ತಿಯು ಈ ದಂಗೆಯನ್ನು ಅಡಗಿಸಿ, ಯೆರೂಸಲೇಮನ್ನು ನಾಶ ಮಾಡಿ, ಆಗಲೇ ಹಾಳುಗೆಡವಿದ್ದ ದೇವಾಲಯದ ಉಳಿದ ಕಡೇಭಾಗಗಳನ್ನು ಉರುಳಿಸಿದನು. ಚರಿತ್ರೆಯ ಪ್ರಕಾರ ವೃದ್ಧ ರಬ್ಬೀ ಅಕೀಬನು ಈ ದಂಗೆಯ ಮತೀಯ ನಾಯಕನಾಗಿದ್ದನು. ಕಬ್ಬಿಣ ಬಾಚಣಿಗೆಗಳಿಂದ ಆ ರಬ್ಬೀಯ ಮೂಳೆಯ ಮೇಲಿನ ಮಾಂಸವನ್ನು ಕೆರೆದು, ನಿಧಾನ ಚಿತ್ರಹಿಂಸೆ

ಮಾಡಿ, ಅವನನ್ನು ಕೊಲ್ಲಲಾಯಿತೆಂದು ಹೇಳಲಾಗಿದೆ. ಆ ದಿನವೆಲ್ಲಾ ಅವನು ಹಿಂಸೆಯನ್ನು ತಾಳಿಕೊಂಡು ಸಂಜೆಯ ಹೊತ್ತಿಗೆ ಧರ್ಮಶಾಸ್ತ್ರದ ಮೊದಲನೇ ಆಜ್ಞೆಯನ್ನು "ಷೇಮಾ"ವನ್ನು ಅಂದರೆ "ಇಸ್ರಾಯೇಲ್ಯರೇ ಕೇಳಿರಿ, ನಮ್ಮ ದೇವರಾದ ಯೆಹೋವನು ಒಬ್ಬನೇ" ಎಂದು ಹೇಳಿ ಕೂಡಲೇ ಪ್ರಾಣ ಬಿಟ್ಟನು. ಈ ಹುತಾತ್ಮನ ಕೂಗಿನಲ್ಲಿ ಇಸ್ರಾಯೇಲ್ಯರ ನಂಬಿಕೆಯ ಮಹಾಲಕ್ಷಣವಾದ "ಒಬ್ಬನೇ ದೇವರು" ಎಂಬುದನ್ನು ಸಾರಲಾಗಿದೆ.

## ಕ್ರೈಸ್ತ ಪುನರ್ ದೃಢೀಕರಣ :

ಇಸ್ರಾಯೇಲ್ಯರ ದೇವರೇ ಕ್ರೈಸ್ತರ ದೇವರೂ ಆಗಿದ್ದಾನೆ. ಅನ್ಯ ಜನಾಂಗದವರಿಗೆ ಅಪೋಸ್ತಲನೂ ಯೆಹೂದ್ಯನೂ ಆಗಿದ್ದ ಕ್ರೈಸ್ತನಾದ ಪೌಲನು "ನಮ್ಮ ಪಿತೃಗಳ ದೇವರನ್ನು ಆರಾಧಿಸಿದನು" (ಅ. ಕೃ. 24:14) ಮತ್ತು "ಒಬ್ಬನೇ ದೇವರು" (1 ತಿಮೋಥೆ 2:5) ಎಂದು ಆತನನ್ನು ವರ್ಣಿಸಿದ್ದಾನೆ.

ಆದಾಗ್ಯೂ ಯೇಸುಕ್ರಿಸ್ತನ ಜನನವು ಕೆಲವು ಸಮಸ್ಯೆಗಳನ್ನು ತಂದೊಡ್ಡಿತು. ಆತನು ತಂದೆಯೊಂದಿಗೆ ಮಗನಾಗಿ ಒಂದು ಏಕೈಕ ಸಂಬಂಧವನ್ನು ಹೊಂದಿರುವುದಾಗಿ ಹೇಳಿದನು. ಕ್ರೈಸ್ತತ್ವದ ಪ್ರಥಮ ನಾಲ್ಕು ಶತಮಾನಗಳಲ್ಲಿ ಈ ಸಂಬಂಧದ ಅರ್ಥವೇನೆಂಬುದನ್ನು ಸ್ಪಷ್ಟವಾಗಿ ವಿವರಿಸಲು ವಿಧವಿಧವಾದ ಪ್ರಯತ್ನಗಳನ್ನು ಮಾಡಲಾಯಿತು. ಕ್ರಿ. ಶ. 4ನೇ ಮತ್ತು 5ನೇ ಶತಮಾನಗಳಲ್ಲಿ ಬಹುಮತ ಪಡೆದ ಒಂದು ಅಭಿಪ್ರಾಯಕ್ಕೆ ಬಂದು, ಸಭಾ ಪರಿಷತ್ತುಗಳು ಮೊದಲು ನೈಸಿಯಾದಲ್ಲಿ (NICEA) (ಕ್ರಿ. ಶ. 451 ರಲ್ಲಿ) ವಿಶ್ವಾಸ ಸೂತ್ರಗಳನ್ನು ಬರೆಯಲಾಯಿತು. ಈಗಾಗಲೇ ರೋಮನ್ ಹಾಗೂ ಗ್ರೀಕ್ ನಂಬಿಕೆಗಳು ಕ್ರೈಸ್ತತ್ವದಲ್ಲಿ ನುಸುಳಿಕೊಂಡಿತ್ತು. ಮುಂದಿನ ಕ್ರೈಸ್ತ ಜನಾಂಗಕ್ಕೆ ದೇವರ ಬಗ್ಗೆ ಇರುವ ಕಲ್ಪನೆಯ ಮಾದರಿಯನ್ನು ಹೀಗೆ ಮುಂದಿಡಲಾಯಿತು. ಈ ಕ್ರೈಸ್ತ ಪರಿಷತ್ತುಗಳ ತೀರ್ಮಾನದ ಅಂತಿಮ ರೂಪವನ್ನು ಅಥನೇಷಿಯನ್ (ATHANASIAN CREED) ವಿಶ್ವಾಸ ಸೂತ್ರದಲ್ಲಿ ಕಾಣಬಹುದು.

## ಅಥನೇಷಿಯನ್ ವಿಶ್ವಾಸ ಸೂತ್ರ (ATHANASIAN CREED)

ಅಥನೇಷಿಯನ್ ವಿಶ್ವಾಸ ಸೂತ್ರದ ಮೂಲವು ಅಸ್ಪಷ್ಟ. ಅದನ್ನು 4ನೇ ಹಾಗೂ 6ನೇ ಶತಮಾನಗಳ ಮಧ್ಯದಲ್ಲಿ ಬರೆಯಲಾಗಿರಬಹುದೆಂದು ತೋರುತ್ತದೆ. ಅದನ್ನು ಅಲೆಕ್ಸಾಂಡ್ರಿಯಾದ ಅಧ್ಯಕ್ಷ (BISHOP OF ALEXANDRIA) ನಾಗಿದ್ದ ಅಥನೇಷಿಯಸ್‌ನ (ಕ್ರಿ ಶ. 295-373) ಹೆಸರಿನ ಮೇಲೆ ಕರೆಯ

ಲಾಯಿತು ಮತ್ತು ಅದು ಅವನ ಅಭಿಪ್ರಾಯಗಳನ್ನು ಪ್ರತಿಬಿಂಬಿಸುತ್ತದೆ. ಅದನ್ನು ಈದು ಹೆಚ್ಚಾಗಿ ಬಳಸದಿದ್ದರೂ ಸಹ, ಪ್ರಾರಂಭದ ಶತಮಾನಗಳಲ್ಲಿ ಅಂಗೀಕರಿಸಿದ ತ್ರಯೈಕತ್ವದ (TRINITY) ವಿವರಣೆಯನ್ನು ಅದು ಚೆನ್ನಾಗಿ ಚಿತ್ರೀಕರಿಸುತ್ತದೆ. ಆಧುನಿಕ ಸಭಾ ಬೋಧನೆಗಳಲ್ಲಿ ಅದರ ಭಾಷೆಯು ಇಂದಿಗೂ ಪ್ರತಿಬಿಂಬಿಸುತ್ತದೆ.

ಅದರಲ್ಲಿನ ಕೆಲವು ಆಯ್ದ ಭಾಗಗಳನ್ನು ಇಲ್ಲಿ ಉಲ್ಲೇಖಿಸುತ್ತೇವೆ :

* * * * *

3 ಸರ್ವ ಕ್ರೈಸ್ತರ ವಿಶ್ವಾಸವು (Catholic Faith) ಇದೇ : ನಾವು ತ್ರಿತ್ವದಲ್ಲಿ (Trinity) ಒಬ್ಬ ದೇವರನ್ನು ಮತ್ತು ಏಕತೆಯಲ್ಲಿ ತ್ರಿತ್ವವನ್ನು ಆರಾಧಿಸುವುದು.

4 ವ್ಯಕ್ತಿಗಳನ್ನು ಭಂಗಪಡಿಸದೇ ಇಲ್ಲವೇ ಸತ್ವವನ್ನು ವಿಭಜನೆ ಮಾಡದೆ.

5 ಯಾಕೆಂದರೆ ತಂದೆಯಾದ ಒಬ್ಬ ವ್ಯಕ್ತಿ : ಮಗನಾದ ಒಬ್ಬ ವ್ಯಕ್ತಿ ಪವಿತ್ರಾತ್ಮದ ಮತ್ತೊಂದು ವ್ಯಕ್ತಿ ಇದ್ದಾರೆ.

* * * * *

7 ತಂದೆಯು ಹೇಗಿದ್ದಾನೋ ಹಾಗೆಯೇ ಮಗನೂ ಆಗಿದ್ದಾನೆ. ಮತ್ತು ಪವಿತ್ರಾತ್ಮನೂ ಹಾಗೆಯೇ ಇದ್ದಾನೆ.

* * * * *

15 ಆದ್ದರಿಂದ ತಂದೆಯು ದೇವರಾಗಿದ್ದಾನೆ, ಮಗನು ದೇವರಾಗಿದ್ದಾನೆ ಮತ್ತು ಪವಿತ್ರಾತ್ಮನೂ ದೇವರಾಗಿದ್ದಾನೆ.

16 ಆದರೂ ಅವರೆಲ್ಲರೂ ಮೂರು ದೇವರುಗಳಾಗಿಲ್ಲ ; ಆದರೆ ಒಬ್ಬನೇ ದೇವರು.

* * * * *

25 ಈ ತ್ರಯೈಕತ್ವದಲ್ಲಿ ಯಾರೊಬ್ಬರೂ ಮೊದಲೇ ಇರಲಿಲ್ಲ. ಅಥವಾ ಒಬ್ಬರಾದ ಮೇಲೆ ಮತ್ತೊಬ್ಬರು ಬರಲಿಲ್ಲ. ಯಾರೂ ಮೇಲಾಗಿಲ್ಲ. ಅಥವಾ ಒಬ್ಬರಿಗಿಂತ ಮತ್ತೊಬ್ಬರು ಕೀಳಾಗಿಲ್ಲ.

26 ಆದರೆ ಎಲ್ಲಾ ಮೂರು ವ್ಯಕ್ತಿಗಳೂ ಒಟ್ಟಾಗಿ ಸಹ–ನಿತ್ಯತ್ವ ಹಾಗೂ ಸಹ–ಸಮಾನತೆಯಲ್ಲಿದ್ದಾರೆ.

* * * * *

ಈ ವಿಶ್ವಾಸ ಸೂತ್ರದಲ್ಲಿ ಒಬ್ಬನೇ ದೇವರಲ್ಲಿ ನಂಬಿಕೆಯನ್ನು ಒತ್ತಿ ಹೇಳಿದ್ದರೂ ಸಹ, ತಂದೆ, ಮಗ, ಪರಿಶುದ್ಧಾತ್ಮಗಳು–ಪ್ರತ್ಯೇಕ ದೇವರುಗಳೆಂಬ ಭಾವನೆಯನ್ನು ತೋರಿಸುತ್ತವೆ. 16ನೇ ಸೂತ್ರದಲ್ಲಿ ಒಬ್ಬನೇ ದೇವರು ಎಂದು ಹೇಳಿದ್ದರೂ, ಈ ವಿಶ್ವಾಸ ಸೂತ್ರವು ಮೂರು ದೇವರುಗಳಲ್ಲಿ ನಂಬಿಕೆ ಇಡಲು ಆಜ್ಞಾಪಿಸುತ್ತದೋ ? ಇದಕ್ಕೆ ಯಾವ ಸುಲಭ ಉತ್ತರವೂ ಇಲ್ಲ. ಈ ವಿಶ್ವಾಸ ಸೂತ್ರದಲ್ಲಿ "ಒಬ್ಬನೇ ದೇವರು" ಎಂಬುದನ್ನು ಬಿಟ್ಟು ಉಳಿದ ನಂಬಿಕೆಗಳಿಗೆ ಸತ್ಯವೇದದ ಯಾವ ಆಧಾರವೂ ಇಲ್ಲ. ಈ ವಿಜ್ಞಾನ ಸೂತ್ರವನ್ನು ರೂಪಿಸಿದ ಮತೀಯ ನಾಯಕರು ಸತ್ಯವೇದದ ವಚನಗಳ ಆಧಾರವನ್ನು ಕೊಡಲು ಸಾಧ್ಯ ವಾಗಲಿಲ್ಲ. ಏಕೆಂದರೆ, ಅವುಗಳು ಸತ್ಯವೇದದಿಂದ ಹೊರತಾದ ಅನ್ಯ ಜನಾಂಗದ ನಂಬಿಕೆಗಳಾಗಿದ್ದವು. ಈ ವಿಶ್ವಾಸ ಸೂತ್ರವನ್ನು ಪ್ರಥಮವಾಗಿ ಬರೆದಂದಿನಿಂದ ಇಂದಿನವರೆಗೂ ಸಭಾ ಪಂಡಿತರು ಇತರ ಅರ್ಥವನ್ನು ವಿವರಿಸಲು ಪ್ರಯತ್ನಿಸು ತ್ತಲೇ ಇದ್ದಾರೆ. ಅವರ ಅಂತಿಮ ಅಭಿಪ್ರಾಯಗಳು ಬೇರೆ ಬೇರೆಯಾಗಿದ್ದು, ಅವರ ಕಲ್ಪನೆಗಳು ಅನೇಕ ಪುಸ್ತಕಗಳಲ್ಲಿ ಹರಡಿಕೊಂಡಿವೆ.

ಒಂದು ತೃಪ್ತಿಕರವಾದ ವಿವರಣೆಯನ್ನು ಸುಲಭವಾಗಿ ತಲುಪಲು ಆಗಲಿಲ್ಲ. ಯಾಕೆಂದರೆ ವಿಶ್ವಾಸಸೂತ್ರವನ್ನು ಬರೆದವರು ನಮ್ಮ ಕಾಲಕ್ಕಿಂತ ಒಂದು ಭಿನ್ನವಾದ ಕಾಲದಲ್ಲಿಯೂ, ಹಾಗೂ ಭಿನ್ನವಾದ ಆಲೋಚನೆಯನ್ನು ಹೊಂದಿದವರೂ ಆಗಿದ್ದರು. ಇದನ್ನು ನಾವು ಗುರುತಿಸದಿದ್ದಲ್ಲಿ, ಈ ವಿಶ್ವಾಸಸೂತ್ರವು ವಿವರಿಸ ಲಾಗದಂತಾದ್ದು.

## ಸತ್ಯವೇದದ ಸಾಕ್ಷ್ಯ

ಒಬ್ಬ ವ್ಯಕ್ತಿಯ ಹೆಸರಿಗೆ ಯೆಹೂದ್ಯರು ಬಹಳಷ್ಟು ಪ್ರಾಮುಖ್ಯತೆಯನ್ನು ಕೊಡುತ್ತಿದ್ದರು, ಅದೇ ಗುಣವನ್ನು, ಕಾರ್ಯವನ್ನು, ಅಧಿಕಾರವನ್ನು ಮತ್ತು ಇರುವಿಕೆಯನ್ನು ಆ ಹೆಸರು ವ್ಯಕ್ತಪಡಿಸುತ್ತಿತ್ತು. ಇದು ದೇವರಿಗೂ ಅನ್ವಯಿಸು ತ್ತಿತ್ತು. ಉದಾಹರಣೆಗೆ, ಧರ್ಮೋಪದೇಶಕಾಂಡ 12 : 5, 11, 21 ಮತ್ತು 14:23, 24ನೇ ವಚನಗಳಲ್ಲಿ ದೇವರು ತಾನು ಆದುಕೊಂಡ ಸ್ಥಳದಲ್ಲಿ ವಾಸಿಸುವುದು ಅಥವಾ ತನ್ನ ಹೆಸರನ್ನು ಒಂದು ಗೊತ್ತಾದ ಸ್ಥಳದಲ್ಲಿ ಸ್ಥಾಪಿಸುವುದನ್ನು ನೋಡ ಬಹುದು. "ನಿಮ್ಮ ದೇವರಾದ ಯೆಹೋವನು ತನ್ನ ಹೆಸರನ್ನು ಸ್ಥಾಪಿಸಿ ಕೊಳ್ಳುವುದಕ್ಕೂ, ತಾನು ವಾಸ ಮಾಡುವುದಕ್ಕೂ ನಿಮ್ಮ ಎಲ್ಲಾ ಕುಲ ಗಳೊಳಗಿಂದ ಆದುಕೊಳ್ಳುವ ಸ್ಥಳದಲ್ಲೇ ನೀವು ಆತನ ದರ್ಶನಕ್ಕಾಗಿ ಕೂಡಬೇಕು." ಹಾಗೆಯೇ "ನನ್ನ ನಾಮವು ಅವನಲ್ಲಿದೆ" ಎಂಬುದಾಗಿ ವಿಮೋಚನಾಕಾಂಡ 23 : 21ರಲ್ಲಿ ದೇವರ ಅಧಿಕಾರದಿಂದ ಕಾರ್ಯ ನಡೆಸುವ ಒಬ್ಬ ದೇವದೂತನ ಬಗ್ಗೆ ತಿಳಿಸಿದೆ.

ಯೇಸುವಿನ ಬಗ್ಗೆಯೂ ಇದನ್ನೇ ಹೇಳಬಹುದಾಗಿದೆ. "ನೀನು ನನಗೆ ಕೊಟ್ಟ ಮನುಷ್ಯರಿಗೆ ನಿನ್ನ ಹೆಸರನ್ನು ತಿಳಿಯಪಡಿಸಿದೆನು" (ಯೋಹಾನ 17:6). ಇದು ಯಾವ ಅರ್ಥದಲ್ಲಿ ಸಾರ್ಥಕವಾಗಿತ್ತೆಂದರೆ ಎಲ್ಲಿಯ ತನಕ ಜನರು ಯೇಸುವನ್ನು ನೋಡಲು ಸಾಧ್ಯವಿತ್ತೋ ಅಷ್ಟರ ಮಟ್ಟಿಗೆ ಅವರು ತಂದೆಯಾದ ದೇವರನ್ನು ನೋಡಲು ಸಾಧ್ಯವಿತ್ತು. ಯೇಸು ಹೇಳಿದ್ದು, "ನನ್ನನ್ನು ನೋಡಿದವನು ತಂದೆಯನ್ನು ನೋಡಿದ್ದಾನೆ" (ಯೋಹಾನ 14:9). ಹಿಂದಿನ ಕಾಲದಲ್ಲಿ ಹೇಗೆ ಯೆಹೋವನು ತನ್ನ ಹೆಸರನ್ನು ಯೆರೂಸಲೇಮಿನಲ್ಲಿ ವಾಸಿಸುವಂತೆ ಮಾಡಿದನೋ ಅದೇ ರೀತಿಯಲ್ಲಿ "ದೇವರು ಕ್ರಿಸ್ತನಲ್ಲಿದ್ದು", "ದೇವರೊಂದಿಗೆ ಸೇರಿಕೊಂಡಿರುವ ಎಲ್ಲಾ ಹೆಸರುಗಳಿಗಿಂತ ಶ್ರೇಷ್ಠವಾದ ಹೆಸರನ್ನು ಆತನಿಗೆ (ಯೇಸುಕ್ರಿಸ್ತನಿಗೆ) ದಯಪಾಲಿಸಿದ್ದಾನೆ" (ಫಿಲಿಪ್ಪಿ 2:10-11). ಕ್ರಿಸ್ತನು ದೇವರ ಅಧಿಕಾರದ ಬಲದ ಮೇಲೆ ಕಾರ್ಯ ನಡೆಸುತ್ತಾನೆ. ಆತನ (ದೇವರ) ಚಿತ್ತಕ್ಕೆ ಪ್ರತಿನಿಧಿಯಾಗಿ ದೇವರ ಕಾರ್ಯಗಳನ್ನೇ ಆತನು (ಕ್ರಿಸ್ತನು) ಮಾಡುವವನಾಗಿದ್ದಾನೆ. ಯೇಸುವು ಹೇಳಿದ್ದು, "ನಾನು ನನ್ನ ತಂದೆಯ (ದೇವರ) **ಆಜ್ಞೆಗಳನ್ನು ಕೈಗೊಂಡು ನಡೆದು** ಆತನ ಪ್ರೀತಿಯಲ್ಲಿ ನೆಲೆಗೊಂಡಿರುವ ಮೇರೆಗೆ ನೀವು ನನ್ನ ಆಜ್ಞೆಗಳನ್ನು ಕೈಗೊಂಡು ನಡೆದರೆ, ನನ್ನ ಪ್ರೀತಿಯಲ್ಲಿ ನೆಲೆಗೊಂಡಿರುವಿರಿ" (ಯೋಹಾನ 15:10).

## ಪವಿತ್ರಾತ್ಮ

ಹಳೆಯ ಹಾಗೂ ಹೊಸ ಒಡಂಬಡಿಕೆಗಳೆರಡರಲ್ಲಿಯೂ ದೇವರು ತನ್ನ ಬಲವನ್ನು ಹಾಗೂ ಇರುವಿಕೆಯನ್ನು ತನ್ನ ಪವಿತ್ರಾತ್ಮದ (ಶಕ್ತಿಯ) ಮೂಲಕ ಮಾನವರಿಗೆ ತೋರ್ಪಡಿಸಿದ್ದಾನೆ. ಪವಿತ್ರಾತ್ಮವು ಶಕ್ತಿಯೊಡಗೂಡಿದ ಪ್ರಭಾವವೆಂದು ಸೂಚಿಸುವ ಅನೇಕ ವಚನಗಳಿವೆ.

"ನಾನು ಎಲ್ಲಾ ಜನರ ಮೇಲೆ ನನ್ನ ಆತ್ಮವನ್ನು ಸುರಿಸುವೆನು" (ಅ. ಕೃ 2:17).

"ದೇವರು ನಜರೇತಿನ ಯೇಸುವನ್ನು ಪವಿತ್ರಾತ್ಮದಿಂದಲೂ, ಬಲದಿಂದಲೂ ಅಭಿಷೇಕಿಸಿದನು" (ಅ. ಕೃ 10:38).

"ಆಗ ಬಿರುಗಾಳಿ ಬೀಸುತ್ತದೋ ಎಂಬಂತೆ ಫಕ್ಕನೆ ಆಕಾಶದೊಳಗಿನಿಂದ ಒಂದು ಶಬ್ದವುಂಟಾಗಿ....ಆಗ ಅವರೆಲ್ಲರೂ (ಶಿಷ್ಯರು) ಪವಿತ್ರಾತ್ಮಭರಿತರಾಗಿ...." (ಅ. ಕೃ 2:2-4).

ಇದಲ್ಲದೆ ಪವಿತ್ರಾತ್ಮ (SPIRIT) ವನ್ನು ವೈಯಕ್ತಿಕವಾಗಿ ಉಲ್ಲೇಖಿಸಿದೆ. ಉದಾಹರಣೆಗೆ — "ದೇವರಾತ್ಮನು ಫಿಲಿಪ್ಪನಿಗೆ ನೀನು ರಥದ ಹತ್ತಿರ ಹೋಗಿ

ಅದರ ಸಂಗಡವೇ ನಡೆ ಎಂದು ಹೇಳಿದನು" (ಅ. ಕೃ 8:29 ; 10:19 ; 11:12 ; 13:2). ಆತ್ಮವು(SPIRIT) ನಿರ್ಧಾರವನ್ನು ತೆಗೆದುಕೊಳ್ಳುತ್ತದೆ. "ಇದಕ್ಕೆ ಹೆಚ್ಚಿನ ಭಾರವನ್ನು ನಿಮ್ಮ ಮೇಲೆ ಹಾಕಬಾರದೆಂದು **ಪವಿತ್ರಾತ್ಮನಿಗೂ** ನಮಗೂ ವಿಹಿತವಾಗಿ ತೋರಿತು" (ಅ. ಕೃ 15:29). ವಿಶ್ವಾಸಿಗಳಿಗೋಸ್ಕರ ಬೇಡಿಕೊಳ್ಳುತ್ತದೆ. "ನಾವು ತಕ್ಕ ಪ್ರಕಾರ ಏನು ಬೇಡಿಕೊಳ್ಳಬೇಕೋ ನಮಗೆ ಗೊತ್ತಿಲ್ಲದ್ದರಿಂದ ಪವಿತ್ರಾತ್ಮನು ತಾನೇ ಮಾತಿಲ್ಲದಂಥ ನರಳಾಟದಿಂದ ನಮಗೋಸ್ಕರ ಬೇಡಿಕೊಳ್ಳುತ್ತಾನೆ (ರೋಮಾಪುರ 8:26 – ಇದರೊಂದಿಗೆ 14 ಮತ್ತು 15ನೇ ವಚನಗಳನ್ನು ಹೋಲಿಸಿ). ಇದನ್ನು ಸಹಾಯಕನು ಎಂದೂ ಸಹ ವಿವರಿಸಿದೆ. "ಆ ಸಹಾಯಕನು ಯಾರೆಂದರೆ ಸತ್ಯದ ಆತ್ಮನೇ.... (ಯೋಹಾನ 14:16-17).

ದೇವರ ಶಕ್ತಿಯನ್ನು ವಿವರಿಸಲು ಮಾನವ ಜ್ಞಾನದಿಂದ ಒಂದು ಒಳ್ಳೆಯ ವಿವರಣೆಯನ್ನು ಕೊಡಲು ಸಾಧ್ಯವಿಲ್ಲ. ದೇವರ ಚಿತ್ತವನ್ನು ತಿಳಿಯಪಡಿಸಲು ಹಾಗೂ ಮಾನವರೊಳಗೆ ತನ್ನ ಇರುವಿಕೆಯನ್ನು ತೋರ್ಪಡಿಸಿಕೊಳ್ಳಲು ಉಪಯೋಗಿಸುವ ಮಾಧ್ಯಮವು ಆತ್ಮವೇ (SPIRIT) ಆಗಿದೆ. ಆತ್ಮವು ಶಕ್ತಿಗಿಂತ ಮಿಗಿಲಾದದ್ದು. ಅದು ದೇವರ ಪ್ರಸನ್ನತೆಯಾಗಿದೆ. ಅದು ಸಹಾಯದಲ್ಲಿ, ಬಲಪಡಿಸುವಲ್ಲಿ ಹಾಗೂ ತಿಳುವಳಿಕೆ ನೀಡುವುದರಲ್ಲೆಲ್ಲಾ ಎಂದರ್ಥ. ಈ ಕಾರಣದಿಂದಾಗಿಯೇ ಹೊಸ ಒಡಂಬಡಿಕೆಯ ಅನೇಕ ವಚನಗಳಲ್ಲಿ ಪವಿತ್ರಾತ್ಮವನ್ನು ವೈಯಕ್ತಿಕವಾಗಿ ಉಲ್ಲೇಖಿಸಲಾಗಿದೆ. ಪವಿತ್ರಾತ್ಮವು ಮಾತಾಡುವುದೆಂದರೆ ಮತ್ತೊಂದು ರೀತಿಯಲ್ಲಿ — "ದೇವರು ಮಾತಾಡುತ್ತಾನೆ" ಎಂದೂ ಪವಿತ್ರಾತ್ಮವನ್ನು ಮಾರ್ಗದರ್ಶಿಯಾಗಿ ಕಳುಹಿಸಲಾಗಿದೆ ಎಂದರೆ ದೇವರೇ ಮಾರ್ಗದರ್ಶನ ನೀಡುತ್ತಾನೆ ಎಂದರ್ಥ. ಹೊಸ ಒಡಂಬಡಿಕೆಯಲ್ಲಿಯೂ ಸಹ ಆತ್ಮವು (SPIRIT) ಎಂದೂ ಆರಾಧಿಸಲ್ಪಡುತ್ತಿರಲಿಲ್ಲ.

ದೇವರಾತ್ಮವು (Spirit of God) ದೇವರಿಂದ ಪ್ರತ್ಯೇಕವಾದ ಒಂದು ವ್ಯಕ್ತಿಯಲ್ಲ. ಆದರೆ ದೇವರಿಂದ ಹೊಮ್ಮುವ ಅದೃಶ್ಯವಾದ ಶಕ್ತಿಯಾಗಿದೆ. ಸೂರ್ಯನ ಶಾಖವು ಅಥವಾ ಸೌರಶಕ್ತಿಯು (Solar Energy) ಹೇಗೆ ಸೂರ್ಯನಿಂದ ಪ್ರತ್ಯೇಕವಲ್ಲವೋ ಹಾಗೆ. ಈ ಕೆಳಗಿನ ಸತ್ಯವಾದ ವಾಕ್ಯಗಳನ್ನು ಗಮನಿಸಿ. "ದೇವರಾತ್ಮವು (the Spirit of God) ಜಲಸಮೂಹಗಳ ಮೇಲೆ ಚಲಿಸುತ್ತಿತ್ತು" (ಆದಿಕಾಂಡ 1:2). "ಯೆಹೋವನೇ ನೀನು ನನ್ನನ್ನು ಪರೀಕ್ಷಿಸಿ ತಿಳುಕೊಂಡಿದ್ದೀ. ನಾನು ಕೂತುಕೊಳ್ಳುವುದೂ, ಏಳುವುದೂ ನಿನಗೆ ಗೊತ್ತದೆ. ದೂರದಿಂದಲೇ ನನ್ನ ಆಲೋಚನೆಗಳನ್ನು ಬಲ್ಲವನಾಗಿರುತ್ತೀ.

........ನಾನು ನಿನ್ನ ಆತ್ಮಕ್ಕೆ (SPIRIT) ತಪ್ಪಿಸಿಕೊಳ್ಳುವಂತೆ ಎಲ್ಲಿಗೆ ಹೋಗಲಿ ? ನಿನ್ನ ಕಣ್ಣಿಗೆ ಮರೆಯಾಗುವಂತೆ ಎಲ್ಲಿಗೆ ಓಡಲಿ ? ...." (ಕೀರ್ತನೆ 139:1-12).

"ನಾನು ದೇವರಾತ್ಮನಿಂದಲೇ ನಿರ್ಮಿತನಾಗಿದ್ದೇನೆ. ನನ್ನ ಜೀವವು ಸರ್ವಶಕ್ತನ ಶ್ವಾಸದಿಂದುಂಟಾಗಿದೆ" (ಯೋಬ. 33:4).

"ಅವನ (ದೇವರ) ಆತ್ಮದಿಂದ ಆಕಾಶವು ಶೃಂಗಾರವಾಗಿದೆ. (By His Spirit he hath garnished the heavens) (ಯೋಬ. 26:13 ಹಳೇ ಭಾಷಾಂತರ).

ಈ ವಚನಗಳನ್ನು ಸೂಕ್ಷ್ಮವಾಗಿ ಓದಿದಲ್ಲಿ ದೇವರ ಆತ್ಮವು ಆತನ ಶಕ್ತಿಯೇ ಆಗಿರುವಲ್ಲಿ ಸಂಶಯವೇ ಇಲ್ಲ. ಇನ್ನೂ ಕೆಲವು ವಚನಗಳನ್ನು ನೋಡಿ. "ಆ ದೂತನು — ನಿನ್ನ ಮೇಲೆ ಪವಿತ್ರಾತ್ಮ ಬರುವುದು ; ಪರಾತ್ಪರನ ಶಕ್ತಿಯು ನೆರಳು ನಿನ್ನ ಮೇಲೆ ಬೀಳುವುದು ; ಅದರಿಂದ ಹುಟ್ಟುವ ಆ ಪವಿತ್ರ ಶಿಶು ದೇವರ ಮಗನೆನಿಸಿಕೊಳ್ಳುವದು" (ಲೂಕ 1:35).

"ದೇವರು ನಜರೇತಿನ ಯೇಸುವನ್ನು ಪವಿತ್ರಾತ್ಮದಿಂದಲೂ ಬಲದಿಂದಲೂ ಅಭಿಷೇಕಿಸಿದನು" (ಅ. ಕೃ 10:38). "ಆತನು (ಯೇಸುಕ್ರಿಸ್ತನು) ಪವಿತ್ರಾತ್ಮದಲ್ಲಿಯೂ ಬೆಂಕಿಯಲ್ಲಿಯೂ ನಿಮಗೆ ಸ್ನಾನಮಾಡಿಸುವನು" (ಮತ್ತಾಯ 3:11). "ಯೋಹಾನನಂತೂ ನೀರಿನಲ್ಲಿ ದೀಕ್ಷಾಸ್ನಾನ ಮಾಡಿಸಿದನು. ನಿಮಗಾದರೋ ಇನ್ನು ಸ್ವಲ್ಪ ದಿವಸಗಳೊಳಗಾಗಿ ಪವಿತ್ರಾತ್ಮ ನಿಮ್ಮ ಮೇಲೆ ಬರಲು ನೀವು ಬಲವನ್ನು ಹೊಂದಿ...." (ಅ. ಕೃ 1:5-8).

"ಆಗ ಬಿರುಗಾಳಿ ಬೀಸುತ್ತದೋ ಎಂಬಂತೆ ಫಕ್ಕನೆ ಆಕಾಶದೊಳಗಿಂದ ಒಂದು ಶಬ್ದವುಂಟಾಗಿ ಅವರು ಕೂತಿದ್ದ ಮನೆಯನ್ನೆಲ್ಲಾ ತುಂಬಿಕೊಂಡಿತು........ ಆಗ ಅವರೆಲ್ಲರೂ ಪವಿತ್ರಾತ್ಮಭರಿತರಾದರು" (ಅ. ಕೃ 2:2-4).

"ನಾನು ಮಾತಾಡುವುದಕ್ಕೆ ಪ್ರಾರಂಭಿಸಿದಾಗ ಪವಿತ್ರಾತ್ಮವು (ವರವು) ಮೊದಲು ನಮ್ಮ ಮೇಲೆ ಇಳಿದಂತೆ ಅವರ ಮೇಲೆಯೂ ಇಳಿಯಿತು. ಆಗ— ಯೋಹಾನನಂತೂ ನೀರಿನ ದೀಕ್ಷಾಸ್ನಾನ ಮಾಡಿಸಿದನು ; ನಿಮಗಾದರೋ ಪವಿತ್ರಾತ್ಮದಲ್ಲಿ ಸ್ನಾನವಾಗುವುದು ಎಂದು ಯೇಸುಸ್ವಾಮಿ ಹೇಳಿದ ಮಾತು ನನ್ನ ನೆನಪಿಗೆ ಬಂತು" (ಅ. ಕೃ 11:15-16).

"ಅಪೋಸ್ತಲರು ಅವರ ಮೇಲೆ ಕೈಗಳನ್ನಿಡಲು ಅವರು ಪವಿತ್ರಾತ್ಮವನ್ನು ಹೊಂದಿದರು. ಅಪೋಸ್ತಲರು ಕೈಗಳನ್ನಿಡುವುದರ ಮೂಲಕವಾಗಿ

ಪವಿತ್ರಾತ್ಮದಾನವಾಗುವುದನ್ನು ಸೀಮೋನನು ನೋಡಿ ಹಣವನ್ನು ತಂದು ಅವನ ಮುಂದಿಟ್ಟು — ನಾನು ಯಾರ ಮೇಲೆ ಕೈಗಳನ್ನು ಇಡುತ್ತೇನೋ ಅವರು ಪವಿತ್ರಾತ್ಮ ವರವನ್ನು ಹೊಂದುವಂತೆ ಈ ಅಧಿಕಾರವನ್ನು (ಶಕ್ತಿಯನ್ನು) ನನಗೂ ಕೊಡಿರಿ ಅಂದನು" (ಅ. ಕೃ 8:17-19).

ಮೇಲ್ಕಂಡ ವಚನಗಳು ಪವಿತ್ರಾತ್ಮದಲ್ಲಿ ಸ್ನಾನವಾಗುವುದೆಂದರೆ ಏನೆಂಬುದನ್ನು ಸ್ಪಷ್ಟವಾಗಿ ತಿಳಿಸುತ್ತದೆ. ಈ ಅರ್ಥವು ಜನಪ್ರಿಯ ವೇದಾಂತಿಗಳ ಅಭಿಪ್ರಾಯಕ್ಕೆ ಭಿನ್ನವಾಗಿರುತ್ತದೆ. ಪವಿತ್ರಾತ್ಮದಲ್ಲಿ ಸ್ನಾನವಾಗುವುದೆಂದರೆ ಆತ್ಮದ ಶಕ್ತಿಯಲ್ಲಿ (Spirit Power) ಸಂಪೂರ್ಣವಾಗಿ ಮುಳುಗಿಸಲ್ಪಟ್ಟು ಅದ್ಭುತಕಾರ್ಯಗಳನ್ನು ಮಾಡಲು ವರವನ್ನು ಹೊಂದಿರುವುದೆಂದು ಅದರ ಅರ್ಥ. ಇಂದು ಪವಿತ್ರಾತ್ಮ ಸ್ನಾನವಾಗುವುದಿಲ್ಲ. ಈಗ ಏನು ಮಾತ್ರ ಮಾಡಬಹುದೆಂದರೆ ದೇವರ ವಾಕ್ಯವನ್ನು ಸಾರುವುದೊಂದೇ. ಈ ವಾಕ್ಯವು ಹಿಂದಿನ ಪ್ರವಾದಿಗಳಲ್ಲಿ, ಅಪೋಸ್ತಲರಲ್ಲಿ ದೇವರ ಶಕ್ತಿಯು (ಆತ್ಮದ) (God's Spirit) ಸಾಧನವಾಗಿ ಕಾರ್ಯಾಚರಣೆ ನಡೆಸಿಕೊಡಲ್ಪಟ್ಟ ವಾಕ್ಯವಾಗಿದೆ. ಈ ಎಲ್ಲಾ ವಚನಗಳಿಂದ ಪವಿತ್ರಾತ್ಮ ಅಥವ ದೇವರ ಆತ್ಮ ಎಂದರೆ — ದೇವರ ಶಕ್ತಿಯೇ ಹೊರತು ಬೇರೇನಲ್ಲವೆಂದು ಸ್ಪಷ್ಟವಾಗಿದೆ.

## ಯೇಸುವಿನ ಸ್ಥಾನ

ಯೇಸುಕ್ರಿಸ್ತನು ದೇವರೊಂದಿಗೆ ಹೊಂದಿರುವ ಸಂಬಂಧವನ್ನು ಸಂಪೂರ್ಣವಾಗಿ ಅರಿಯದೆ, ದೇವರ ನಿಜವಾದ ಗುಣ ಲಕ್ಷಣಗಳನ್ನು ತಿಳಿಯಲಾಗುವುದಿಲ್ಲ. ಯೇಸು ಹೇಳಿದ್ದು "ಒಬ್ಬನೇ ಸತ್ಯದೇವರಾಗಿರುವ ನಿನ್ನನ್ನೂ ನೀನು ಕಳುಹಿಸಿಕೊಟ್ಟ ಯೇಸುಕ್ರಿಸ್ತನನ್ನೂ ತಿಳಿಯುವುದೇ ನಿತ್ಯ ಜೀವವು" (ಯೋಹಾನ 17:3). ಅಂದರೆ ದೇವರು ಯಾರು ? ಯೇಸುಕ್ರಿಸ್ತನು ಯಾರು ? ದೇವರಿಗೂ ಯೇಸುಕ್ರಿಸ್ತನಿಗೂ ಇರುವ ಸಂಬಂಧ, ಮಾನವನಿಗೂ ದೇವರಿಗೂ ಇರುವ ಸಂಬಂಧ ಇತ್ಯಾದಿಗಳನ್ನು ಸ್ಪಷ್ಟವಾಗಿ ತಿಳಿಯುವುದೇ ನಿತ್ಯಜೀವವನ್ನು ಹೊಂದುವುದಕ್ಕೆ ಮಾರ್ಗವಾಗಿರುತ್ತದೆ. ಇದನ್ನು ಅರಿಯದಿದ್ದಲ್ಲಿ ನಿತ್ಯಜೀವದ ಮಾರ್ಗವು ನಮಗೆ ಗೋಚರವಾಗುವುದಿಲ್ಲ.

ಯೇಸುವು ಹುಟ್ಟಿನಿಂದಲೇ ಮಾನವನಾಗಿದ್ದನು. ಆದರೆ ಪರಿಪೂರ್ಣವಾದ ಮಾನವ ಜೀವಿತವನ್ನು ನಡೆಸಿದನು. ಆತನು ನಮ್ಮಂತೆಯೇ ಹಸಿದನು, ಬಾಯಾರಿದನು, ಆಯಾಸಗೊಂಡನು, ಮನೋವೇದನೆಯನ್ನು ಅನುಭವಿಸಿದನು. ಮತ್ತು ಮರಣ ಹೊಂದಿದನು. ಯೇಸುವೂ ಕೂಡ ದೇವರನ್ನು

"ಒಬ್ಬನೇ ಸತ್ಯದೇವರೆಂದು" (ಒಬ್ಬ ಯೆಹೂದ್ಯನು ಮಾಡಬೇಕಾದ ರೀತಿಯಲ್ಲಿ) ಕರೆದು ಆತನಿಗೆ ಪ್ರಾರ್ಥನೆ ಮಾಡಿದನು. (ಯೋಹಾನ 17:3). "ಕ್ರಿಸ್ತನು ತನ್ನನ್ನು ಮರಣಕ್ಕೆ ತಪ್ಪಿಸಿ ಕಾಪಾಡಶಕ್ತನಾಗಿರುವಾತನಿಗೆ ಬಲವಾಗಿ ಕೂಗುತ್ತಾ, ಕಣ್ಣೀರನ್ನು ಸುರಿಸುತ್ತಾ ಪ್ರಾರ್ಥನೆ ವಿಜ್ಞಾಪನೆಗಳನ್ನು ಸಮರ್ಪಿಸಿದನು" (ಇಬ್ರಿಯ 5:7). ಆತನ ಅನುಭವವು ಆತನ ನಡತೆಯನ್ನು ಪಕ್ವಗೊಳಿಸಲು ಪರಿಣಾಮಕಾರಿಯಾಗಿತ್ತು — "ಆತನು ಮಗನಾಗಿದ್ದರೂ ಅನುಭವಿಸಿದ ಬಾಧೆಗಳಿಂದಲೇ ವಿಧೇಯತೆಯನ್ನು ಕಲಿತುಕೊಂಡನು" (ಇಬ್ರಿಯ 5:8). ಆತನು ದೇವರನ್ನೇ ಅರಿತುಕೊಂಡಿದ್ದನು. "ತಂದೆಯು ಮಾಡುವುದನ್ನು ಕಂಡು ಮಗನು ಮಾಡುತ್ತಾನೆಯೇ ಹೊರತು, ತನ್ನಷ್ಟಕ್ಕೆ ತಾನೇ ಏನೂ ಮಾಡಲಾರನು...."(ಯೋಹಾನ 5:19). ದೇವರು ತಿಳಿದಿರುವಂತೆ ಯೇಸುವು ಘಟನೆಗಳನ್ನು ಅರಿತಿರುವುದಿಲ್ಲ. ಸತ್ತ ಲಾಜರನ ಬಗ್ಗೆ "ಆತನನ್ನು ಎಲ್ಲಿಟ್ಟಿದ್ದೀರಿ?" ಎಂದು ಕೇಳಿದನು. (ಯೋಹಾನ 11:34). ಲೋಕದ ಅಂತ್ಯದ ದಿವಸ ಅಥವಾ ಕ್ರಿಸ್ತನು ಲೋಕಕ್ಕೆ ಹಿಂದಿರುಗಿ ಬರುವ ದಿವಸದ ಬಗ್ಗೆ ಯೇಸುಕ್ರಿಸ್ತನೇ ತಿಳಿದಿಲ್ಲ. "ಆ ದಿನದ ವಿಷಯವಾಗಲೀ, ಆ ಗಳಿಗೆಯ ವಿಷಯವಾಗಲಿ ನನ್ನ ತಂದೆಗೆ ತಿಳಿಯುವುದೇ ಹೊರತು ಪುತ್ರಾರಿಗೂ ತಿಳಿಯದು; ಪರಲೋಕದಲ್ಲಿರುವ ದೂತರಿಗೂ ತಿಳಿಯದು, **ಮಗನಿಗೂ ತಿಳಿಯದು**" (ಮಾರ್ಕ 13:32). ಯೇಸುವು ತಂದೆಯಾದ ದೇವರಿಗಿಂತ ಹೆಚ್ಚಿನವನೂ ಅಲ್ಲ, ಸಮಾನನೂ ಅಲ್ಲ ಎಂಬುದನ್ನು ತಾನೇ ಹೇಳಿದ್ದಾನೆ. ತಾನು ತನ್ನ ತಂದೆಗಿಂತ ಕೆಳಮಟ್ಟದವನು ಎಂದು ಈ ವಚನದಲ್ಲಿ ಕಾಣಬಹುದು. "ನೀವು ನನ್ನನ್ನು ಪ್ರೀತಿಸುವವರಾಗಿದ್ದರೆ ನಾನು ತಂದೆಯ ಬಳಿಗೆ ಹೋಗುವ ವಿಷಯದಲ್ಲಿ ಸಂತೋಷಪಡುತ್ತಿದ್ದಿರಿ. ಯಾಕೆಂದರೆ ತಂದೆಯು ನನಗಿಂತ ದೊಡ್ಡವನು" (ಯೋಹಾನ 4:28). ಯೇಸುಕ್ರಿಸ್ತನು ಮರಣ ಹೊಂದುವಾಗ ತನ್ನ ತಂದೆಗೆ (ದೇವರಿಗೆ) ಹೀಗೆ ಪ್ರಾರ್ಥಿಸುತ್ತಾನೆ, "ನನ್ನ ದೇವರೇ, ನನ್ನ ದೇವರೇ, ಯಾಕೆ ನನ್ನ ಕೈಬಿಟ್ಟಿದ್ದೀ ?" (ಮತ್ತಾಯ 27:46). ಎಲ್ಲಾ ವಿಷಯಗಳಲ್ಲಿಯೂ ಯೇಸುವು ದೇವರನ್ನೇ ಆತುಕೊಂಡಿದ್ದನು ಎಂದು ಸ್ಪಷ್ಟವಾಗುತ್ತದೆ. ಯೇಸುವು ಸತ್ತ ನಂತರ ಮೂರನೆಯ ದಿವಸದಲ್ಲಿ ಆತನನ್ನು ಸತ್ತವರೊಳಗಿಂದ ಜೀವಿತನಾಗಿ ಎಬ್ಬಿಸಲ್ಪಟ್ಟಿದ್ದು ದೇವರಿಂದಲೇ. "ಆತನನ್ನು (ಯೇಸುವನ್ನು) **ದೇವರು** ಮರಣವೇದನೆಗಳಿಂದ ಬಿಡಿಸಿ, ಎಬ್ಬಿಸಿದನು" (ಅ. ಕೃ 2:24). ನೀವು ಮರದ ಕಂಬಕ್ಕೆ ತೂಗಹಾಕಿ ಕೊಂದ ಯೇಸುವನ್ನು ನಮ್ಮ ಪಿತೃಗಳ **ದೇವರು** ಎಬ್ಬಿಸಿದನು" (ಅ. ಕೃ 5:30). "ಯೇಸುವನ್ನು ಸತ್ತವರೊಳಗಿಂದ ಜೀವಿತನಾಗಿ **ಎಬ್ಬಿಸಿದಾತನು** ನಿಮ್ಮಲ್ಲಿ ವಾಸವಾಗಿರುವ ತನ್ನ ಆತ್ಮನ ಮೂಲಕ ನಿಮ್ಮ

ಮರ್ತ್ಯ ದೇಹಗಳನ್ನು ಸಹ ಬದುಕಿಸುವನು" (ಅ. ಕೃ 8:11). ತಂದೆಯಾದ **ದೇವರಿಂದ** ನಿತ್ಯಜೀವವನ್ನು ಹೊಂದಿ, ಪರಲೋಕಕ್ಕೆ ಏರಿಹೋದ ನಂತರವೂ ಸಹ ಕ್ರಿಸ್ತನಿಗೆ ತಲೆ ದೇವರಾಗಿದ್ದಾನೆ. "ಕ್ರಿಸ್ತನಿಗೆ **ದೇವರು** ತಲೆ ಆಗಿದ್ದಾನೆ" (1 ಕೊರಿಂಥ 11:3). ಕ್ರಿಸ್ತನಿಗೆ ಪುನರುತ್ಥಾನವಾದ ನಂತರ ಎಲ್ಲಾ ಅಧಿಕಾರ ವನ್ನು **ಕೊಟ್ಟವನು ದೇವರೇ** ಆಗಿದ್ದಾನೆ. "ಪರಲೋಕದಲ್ಲಿಯೂ ಭೂಲೋಕ ದಲ್ಲಿಯೂ ಎಲ್ಲಾ ಅಧಿಕಾರವು ನನಗೆ **ಕೊಡಲ್ಪಟ್ಟಿದೆ**" (ಮತ್ತಾಯ 28:18). ಆದರೂ ಸಹ ಆತನು (ಯೇಸುವು) ದೇವರಿಗೆ ಅಧೀನನಾಗಿದ್ದಾನೆ. "ಮಗನು ಸಮಸ್ತವನ್ನೂ **ತನಗೆ ಅಧೀನ ಮಾಡಿ ಕೊಟ್ಟಾತನಿಗೆ** ತಾನೇ ಅಧೀನನಾಗುವನು (1 ಕೊರಿಂಥ 15:28).

ಹೊಸ ಒಡಂಬಡಿಕೆಯ ಎಲ್ಲಾ ವಚನಗಳಲ್ಲಿ ಯೇಸುವು ಒಬ್ಬ ವ್ಯಕ್ತಿಯೆಂದು ವಿವರಿಸಲ್ಪಟ್ಟಿದ್ದು, ದೇವರಿಗೆ ಸೇರಿದೆಲ್ಲವುಗಳನ್ನೂ ಆತನು ಪಾಲು ಹೊಂದಿಲ್ಲದ ಒಬ್ಬ ಪ್ರತ್ಯೇಕ ಮನುಷ್ಯನಾಗಿದ್ದಾನೆ. ಆದರೆ ದೇವರಿಂದ ಮಾನ ಪ್ರಭಾವಗಳನ್ನು ಪಡೆದ ಒಬ್ಬ ಏಕೈಕ ವ್ಯಕ್ತಿಯಾಗಿದ್ದಾನೆ.

## ಕ್ರಿಸ್ತನು ಯಾರಾಗಿದ್ದನು ?

ಕ್ರಿಸ್ತನು ದೇವರೊಂದಿಗೆ ಹೊಂದಿರುವ ಸಂಬಂಧವನ್ನು ವಿಶೇಷವಾಗಿ ಆತನ ದೈವೀಕ ಮೂಲವನ್ನು ನಾವು ತಿಳಿಯಬೇಕಾದಲ್ಲಿ ಸತ್ಯವೇದವನ್ನು ಬರೆದಿರುವ ಭಾಷಾಶೈಲಿಯನ್ನು ಸರಿಯಾದ ರೀತಿಯಲ್ಲಿ ನಾವು ಅರ್ಥ ಮಾಡಿಕೊಳ್ಳಬೇಕು.

ಸತ್ಯವೇದದ ಭಾಷೆಯಲ್ಲಿ ಉಪಯೋಗಿಸಿರುವ "ವಾಕ್ಯ" ಹಾಗೂ "ಜ್ಞಾನ" ಎಂಬ ಪದಗಳೇ ಇಂದು ಕ್ರೈಸ್ತ ಸಭೆಯಲ್ಲಿ ರೂಢಿಯಲ್ಲಿರುವ ವಿಶ್ವಾಸ ಸೂತ್ರ (CREED)ದಲ್ಲಿ "ವ್ಯಕ್ತಿ" ಎಂಬ ಪದದ ಬಳಕೆಗೆ ಆಧಾರವಾಗಿದೆ. ಯೋಹಾನನ ಸುವಾರ್ತೆಯ ಪ್ರಾರಂಭದಲ್ಲಿ ಈ ರೀತಿ ಇದೆ :—

"ಆದಿಯಲ್ಲಿ ವಾಕ್ಯವಿತ್ತು; ಆ ವಾಕ್ಯವು ದೇವರ ಬಳಿಯಲ್ಲಿತ್ತು. ಆ ವಾಕ್ಯವು ದೇವರಾಗಿತ್ತು. ಇದರಿಂದ ಎಲ್ಲಾ ಉಂಟಾಯಿತು; ಅದು ಇಲ್ಲದೆ ಉಂಟಾದವುಗಳಲ್ಲಿ ಒಂದಾದರೂ ಉಂಟಾಗಲಿಲ್ಲ....ಇದಲ್ಲದೆ ಆ ವಾಕ್ಯವು ಮಾಂಸವಾಯಿತು. ನಮ್ಮಲ್ಲಿ ವಾಸಮಾಡಿತು" (ಯೋಹಾನ 1:1-14 – ಹಳೇ ಭಾಷಾಂತರ).

ಈ ವಚನಗಳು "ವಾಕ್ಯ" ಎಂದು ಕರೆಯಲ್ಪಡುವ ಒಬ್ಬ ಮಾರ್ಮಿಕ ವ್ಯಕ್ತಿಯೊಬ್ಬನು ದೇವರೊಂದಿಗೆ ವಾಸಿಸುತ್ತಿದ್ದು, ಆತನಂತೆಯೇ ಪರಿಪೂರ್ಣ ವಾಗಿದ್ದು ಕಾಲಾನುಕ್ರಮವಾಗಿ ಮಾಂಸದಲ್ಲಿ (ಮಾನವನಾಗಿ) ಬಂದು, ನಜರೇತಿನ

ಯೋಸಂವಾದನು ಎಂದು ಬಹುತೇಕ ಜನರು ಅರ್ಥಮಾಡಿಕೊಂಡಿರುವುದಲ್ಲದೆ, ಇಂದು ಕ್ರೈಸ್ತರೆನಿಸಿಕೊಂಡವರೆಲ್ಲರೂ ಸಹ ಇದೇ ನಂಬಿಕೆಯನ್ನು ಹೊಂದಿರುವವರಾಗಿದ್ದಾರೆ. ಆದರೆ ಸತ್ಯವೇದದ ಭಾಷಾಶೈಲಿಯನ್ನು ನಾವು ಸೂಕ್ಷ್ಮವಾಗಿ ಗಮನಿಸಿದಲ್ಲಿ ಹಾಗೂ ಸತ್ಯವೇದದಲ್ಲಿ ಪ್ರಕಟಮಾಡಿರುವಂತೆ ದೇವರ ವ್ಯಕ್ತಿತ್ವವನ್ನು ಅರ್ಥ ಮಾಡಿಕೊಂಡಲ್ಲಿ ಈ ವಚನಗಳು ಬೇರೆ ಅರ್ಥವನ್ನು ಕೊಡುತ್ತದೆಂಬುದರಲ್ಲಿ ಸಂದೇಹವಿಲ್ಲ. ಈ ರೀತಿಯ ಭಾಷೆಯು ಪ್ರಾಚೀನ ಶೈಲಿಯಾಗಿದ್ದು ಅದರ ರೀತಿಯಲ್ಲಿಯೇ ಓದಿಕೊಳ್ಳಬೇಕಾಗಿದೆ. ಮಾ ನ ವ ರು ಯಾವುದಾದರೊಂದು ಮುಖ್ಯ ಕಾರ್ಯವನ್ನು ಮಾಡಲು ಉದ್ದೇಶಿಸುವ ಮುನ್ನ ಒಂದು ಯೋಜನೆಯನ್ನು ರೂಪಿಸುವುದರಿಂದ ಪ್ರಾರಂಭಿಸುತ್ತಾರೆ.

ಶತ್ರುವಿನ ಮೇಲೆ ಧಾಳಿ ನಡೆಸುವ ಮುನ್ನ ಸೈನ್ಯಾಧಿಪತಿಯು ಯುದ್ಧದ ಒಂದು ಯೋಜನೆಯನ್ನು ತಯಾರಿಸಿ, ಅದನ್ನು ತನ್ನ ಅಧೀನ ಅಧಿಕಾರಿಗಳಿಗೆ ತಿಳಿಸುತ್ತಾನೆ, ಒಂದು ಬೃಹತ್ ಕಟ್ಟಡವನ್ನು ಕಟ್ಟುವ ಮುನ್ನ ಅದರ ವಿವರವಾದ ನಕ್ಷೆಯನ್ನು ತಯಾರಿಸಲು ಒಬ್ಬ ವಾಸ್ತುಶಿಲ್ಪಿಯನ್ನು ನೇಮಕ ಮಾಡುತ್ತಾರೆ. ಮಾನವರ ಯೋಜನೆಗಳು ಅನೇಕ ವೇಳೆ ಏನೂ ಇಲ್ಲದಂತಾಗುತ್ತದೆ. ಶತ್ರುವಿನ ಅನಿರೀಕ್ಷಿತ ಧಾಳಿಯಿಂದಾಗಿ ತಮ್ಮ ಧಾಳಿಯನ್ನು ಪ್ರಾರಂಭಿಸಲು ಸೈನ್ಯಾಧಿಕಾರಿಗಳಿಗೆ ಸಾಧ್ಯವಿಲ್ಲದಾಗಬಹುದಾಗಿದೆ. ಕಕ್ಷಿಗಾರನು ಹಣ ಕೊರತೆಯಿಂದಾಗಿ ನಕ್ಷೆಯನ್ನು ಹರಿದು ಹಾಕುವಂತೆ ವಾಸ್ತುಶಿಲ್ಪಿಗೆ ಹೇಳಬಹುದು.

ಆದರೆ ಈ ಲೋಕದಲ್ಲಿ ದೇವರು ತನ್ನ ಯೋಜನೆಯನ್ನು ಕಾರ್ಯಾಚರಣೆಗೆ ತರುವಲ್ಲಿ ಯಾವುದೊಂದು ಅಡ್ಡಿ ಬಾರದು. ಆತನು ತನ್ನ ಕಾರ್ಯವನ್ನು ಪ್ರಾರಂಭಿಸುವ ಮುನ್ನವೇ ಆ ಕಾರ್ಯವನ್ನು ಪೂರೈಸಿರುವ ಹಾಗೆ ಆತನು ಮಾತನಾಡಲು ಪ್ರಾರಂಭಿಸಿದನು.

ಹಳೇ ಒಡಂಬಡಿಕೆಯಲ್ಲಿ ದೇವರ ಯೋಜನೆಗೆ ಒಂದು ಹೆಸರಿದೆ. ಅದನ್ನು ದೇವರ "ಜ್ಞಾನ" ಎಂದು ಕರೆದಿದೆ, ದಿ ನ್ಯೂ ಬೈಬಲ್ ಡಿಕ್ಷನರಿ (ಕ್ರಿಸ್ಟಡೆಲ್ಫಿಯನ್ನರಲ್ಲದ ಇತರೆ ಸಭೆಯವರಿಂದ ಬರೆದಿರುವ) ಯಲ್ಲಿ ಹಳೇ ಒಡಂಬಡಿಕೆಯಲ್ಲಿ ಉಲ್ಲೇಖಿಸಿರುವ ಜ್ಞಾನವು "ದೇವರು ತನ್ನ ಮನಸ್ಸಿನಲ್ಲಿ ಏನಿರುವುದೋ ಅದರ ನಿಶ್ಚಿತ ನೆರವೇರುವಿಕೆಯೇ ಆಗಿದೆ." ಅದು ಒಂದು ಒಳ್ಳೆಯ ವಿವರಣೆಯಾಗಿದೆ. ಅದು ಹಳೇ ಒಡಂಬಡಿಕೆಯ ವಚನಗಳನ್ನು ಚೆನ್ನಾಗಿ ಸರಿಹೊಂದುತ್ತದೆ. "ಜ್ಞಾನವೆಂಬಾಕೆಯು ಕರೆಯುತ್ತಾಳೆ,ವಿವೇಕವೆಂಬ ಆಕೆಯೇ ದನಿಗೈಯುತ್ತಾಳೆ....ಪುರಪ್ರವೇಶದ ದ್ವಾರಗಳಲ್ಲಿ, ಬಾಗಿಲುಗಳೊಳಗೆ ಜನ ಸೇರುವ ಸ್ಥಳದಲ್ಲಿ ಹೀಗೆ ಕೂಗುತ್ತಾಳೆ....ಯೆಹೋವನು ತನ್ನ ಸೃಷ್ಟಿ ಕ್ರಮದಲ್ಲಿ ಮೊದಲು ನನ್ನನ್ನು

ನಿರ್ಮಿಸಿದನು : ಆತನ ಪುರಾತನ ಕಾರ್ಯಗಳಲ್ಲಿ ನಾನೇ ಪ್ರಥಮ, ಪ್ರಾರಂಭದಲ್ಲಿ, ಭೂಮಿಯು ಹುಟ್ಟುವುದಕ್ಕಿಂತ ಮುಂಚೆ, ಅನಾದಿ ಕಾಲದಲ್ಲಿ ಸ್ಥಾಪಿಸಲ್ಪಟ್ಟೆನು." (ಜ್ಞಾನೋಕ್ತಿ 8:1-23). ಅಂದರೆ ದೇವರು ಈ ಲೋಕದ ಮೇಲೆ ತನ್ನ ಕಾರ್ಯವನ್ನು ಪ್ರಾರಂಭಿಸುವ ಮುನ್ನ ಆತನು ತನ್ನ ಯೋಜನೆಯನ್ನು (ಯೆಹೂದ್ಯರು ಕರೆದಿರುವಂತೆ—ಜ್ಞಾನವನ್ನು) ರೂಪಿಸಿದನು.

ಗ್ರೀಕರು—ಒಬ್ಬ ದೇವರು ಅಥವ ದೇವರುಗಳಲ್ಲಿ (ಸತ್ಯವೇದದ ದೇವರಲ್ಲ) ನಂಬಿಕೆಯಿಟ್ಟಿದ್ದ ಅವರು ಅದಕ್ಕೆ ಬೇರೊಂದು ಹೆಸರನ್ನು ಕೊಟ್ಟಿದ್ದರು. ಅವರು ಅದನ್ನು ದೇವರ "ವಾಕ್ಯ" ಎಂಬ ಗ್ರೀಕ್ ಪದಕ್ಕೆ "ದೇವರ ಯೋಜನೆ ಮತ್ತು ಸೃಷ್ಟಿಕಾರ್ಯದ ಆತನ ಶಕ್ತಿ" ಎಂದು ಕರೆಯುತ್ತಿದ್ದರು.

ಇದು ನಮಗೆ ಸಹಾಯಕವಾಗಿದೆ. ಯಾಕೆಂದರೆ ಯೋಹಾನನ ಸುವಾರ್ತೆಯ ಒಂದನೇ ಅಧ್ಯಾಯವನ್ನು ನಾವು ಅರ್ಥ ಮಾಡಿಕೊಳ್ಳಲು ಸಹಾಯ ಮಾಡುತ್ತದೆ. ಯೋಹಾನನು ಗ್ರೀಕರ ದೇವರ ವಾಕ್ಯದ ಕಲ್ಪನೆಯೊಂದಿಗೆ ಯೆಹೂದ್ಯರ ದೇವರ ಜ್ಞಾನದ ಕಲ್ಪನೆಯನ್ನು ಸೇರಿಸಿದಂತಿದೆ. ಅವನ ಸುವಾರ್ತೆಯು ಹೀಗೆ ಪ್ರಾರಂಭವಾಗುತ್ತದೆ. "ಆದಿಯಲ್ಲಿ ವಾಕ್ಯವಿತ್ತು."

ಈ ವಾಕ್ಯದಿಂದ ಕೆಲವು ಜನರು ಅರ್ಥ ಮಾಡಿಕೊಳ್ಳುವುದಿಲ್ಲ. ಇತರರು ತಾವು ಅರ್ಥ ಮಾಡಿಕೊಳ್ಳುತ್ತೇವೆಂದು ಭಾವಿಸುತ್ತಾರೆ ; ಆದರೆ ಅವರು ಅದರಿಂದ ತಪ್ಪಾದ ಅರ್ಥವನ್ನು ಮಾಡಿಕೊಳ್ಳುತ್ತಾರೆ ; ಯಾಕಂದರೆ ಅವರು "ವಾಕ್ಯ" ವೆಂಬುದನ್ನು ಒಬ್ಬ ಜೀವಂತ ವ್ಯಕ್ತಿಯೆಂದು ಭಾವಿಸುತ್ತಾರೆ. ಗ್ರೀಕ್ ಭಾಷೆಯಲ್ಲಿ "ಅವನು" ಎಂಬ ಪದ "ಅದು" ಎಂಬುದಾಗಿಯೂ ಅರ್ಥ ಕೊಡುತ್ತದೆ. (ಆದ್ದರಿಂದಲೇ ಭಾಷಾಂತರಕಾರರು ಆ ರೀತಿ ಉಪಯೋಗಿಸುತ್ತಾರೆ.)

ಈಗ ನಾವು ದೇವರ "ವಾಕ್ಯ"ಕ್ಕೆ ಬದಲಾಗಿ, ಆತನ "ಯೋಜನೆ"ಯನ್ನು ಆಲೋಚಿಸಿದಲ್ಲಿ ಹಾಗೂ "ಅವನು" ಎಂಬುದಕ್ಕೆ ಬದಲಾಗಿ "ಅದು" ಎಂದು ಉಪಯೋಗಿಸಿದಲ್ಲಿ, ಯೋಹಾನ 1ನೇ ಅಧ್ಯಾಯದಿಂದ ನಾವಿದನ್ನು ಕಲಿಯುತ್ತೇವೆ :

"ಆದಿಯಲ್ಲಿ ಯೋಜನೆಯಿತ್ತು, ಆ ಯೋಜನೆಯು ದೇವರ ಬಳಿಯಲ್ಲಿತ್ತು, ಮತ್ತು ಆ ಯೋಜನೆಯು ದೇವರಾಗಿತ್ತು. ಅದು ಆದಿಯಲ್ಲಿ ದೇವರ ಬಳಿಯಲ್ಲಿತ್ತು ; ಸಮಸ್ತವೂ ಅದರ ಮೂಲಕವಾಗಿ ಉಂಟಾಯಿತು, ಅದು ಇಲ್ಲದೆ ಉಂಟಾದವುಗಳಲ್ಲಿ ಒಂದಾದರೂ ಉಂಟಾಗಲಿಲ್ಲ. ಅದರಲ್ಲಿ ಜೀವವಿತ್ತು. ಆ ಜೀವವು ಮನುಷ್ಯರಿಗೆ ಬೆಳಕಾಗಿತ್ತು....ಆ ಯೋಜನೆಯು ಮಾಂಸವಾಯಿತು, ಕೃಪೆಯಿಂದಲೂ ಸತ್ಯದಿಂದಲೂ ತುಂಬಿ ನಮ್ಮಲ್ಲಿ ವಾಸಮಾಡಿತು ; ಮತ್ತು ತಂದೆ

ಯಿಂದ ಒಬ್ಬನೇ ಹುಟ್ಟಿದವನ ಮಹಿಮೆಯು ಹಾಗೆ ಅವನ ಮಹಿಮೆಯನ್ನು ನೋಡಿದೆವು." (ಯೋಹಾನ 1:1-14).

ಯೋಹಾನನ ಈ ಮಾತುಗಳು ಸತ್ಯವೇದದ ಬೋಧನೆಯನ್ನು ಸುಂದರ ವಾಗಿ ನಿರೂಪಿಸುತ್ತದೆ. ಯೇಸುವು ಆದಿಯಿಂದಲೂ ಪರಲೋಕದಲ್ಲಿ ಅಸ್ತಿತ್ವ ದಲ್ಲಿದ್ದನು ಆದರೆ ಒಬ್ಬ ವ್ಯಕ್ತಿಯಾಗಲ್ಲ ; ದೇವರ ಯೋಜನೆಯು ಕೇಂದ್ರುವಾಗಿ ದೇವರ ಮನಸ್ಸಿನಲ್ಲಿ ಒಂದು ಮಹಾ ಕಲ್ಪನೆಯಂತೆ ಆತನು ಅಸ್ತಿತ್ವದಲ್ಲಿದ್ದನು. ಬೆತ್ಲೆಹೇಮಿನಲ್ಲಿ ಆತನು ಹುಟ್ಟುವ ತನಕ ಆತನು ಒಬ್ಬ ವ್ಯಕ್ತಿಯಾಗಿ ಅಸ್ತಿತ್ವ ದಲ್ಲಿರಲಿಲ್ಲ. ಆಗ, ಯೋಹಾನನ ವಾಕ್ಯದಲ್ಲಿ, "ಆ ಯೋಜನೆಯು ಮಾಂಸ ವಾಯಿತು (ಶರೀರವಾಯಿತು)." ಇದೇ ಶೈಲಿಯ ಬರವಣಿಗೆಯನ್ನು ನಾವು ಜ್ಞಾನೋಕ್ತಿ 8:22 ರಲ್ಲಿ ನೋಡಬಹುದಾಗಿದೆ :

"ಯೆಹೋವನು ತನ್ನ ಕ್ರಿಯೆಗಳಿಗೆ ಮುಂಚೆ ಪೂರ್ವದಲ್ಲಿ, ತನ್ನ ಮಾರ್ಗದ ಆರಂಭದಲ್ಲಿ ನನ್ನನ್ನು ಪಡಕೊಂಡಿದ್ದನು. ಯುಗಯುಗದಿಂದ ಆದಿಯಿಂದ, ಭೂಮಿಯ ಉತ್ಪತ್ತಿಗೆ ಮುಂಚೆ ನಾನು ಅಭಿಷೇಕಿಸಲ್ಪಟ್ಟೆನು...."

"ಅವನು ಭೂಮಿಯ ಅಸ್ತಿವಾರಗಳನ್ನು ನೇಮಿಸಿದಾಗ....ನಾನು ಶಿಲ್ಪಿಯಾಗಿ ಅವನ ಹತ್ತಿರ ಇದ್ದೆನು. ಎಲ್ಲಾ ಕಾಲದಲ್ಲಿ ಅವನ ಮುಂದೆ ಆಡುತ್ತಾ ದಿನ ದಿನಕ್ಕೆ ಆನಂದವಾಗಿದ್ದೆನು." (ಹಳೇ ಭಾಷಾಂತರ). ಈ ವಚನಗಳನ್ನು ನಾವು ಅದನ್ನು ಬರೆದ ಭಾಷಾ ಶೈಲಿಯಲ್ಲಿ ಅರ್ಥಮಾಡಿಕೊಂಡಲ್ಲಿ, ಇಲ್ಲಿ ಮಾತಾಡು ತ್ತಿರುವ ವ್ಯಕ್ತಿಯು "ಜ್ಞಾನ"ವೆಂಬುದು. ಇದಕ್ಕೆ ದೇವರ ಬಳಿ ಒಬ್ಬ ಸ್ತ್ರೀಯು ಜೀವಿಸುತ್ತಿರುವಂತೆಯೂ, ಆಕೆಯ ಗುಣಲಕ್ಷಣಗಳನ್ನು ಇಲ್ಲಿ ವಿವರಿಸುತ್ತಿರು ವಂತೆಯೂ ಇವೆ. (ಜ್ಞಾನೋಕ್ತಿ 8ನೇ ಅಧ್ಯಾಯ 1ನೇ ವಚನದಿಂದಲೇ ಓದಿ). ಇದೇ ರೀತಿಯ ಬರಹ ಶೈಲಿಯನ್ನೂ ಯೆಹೂದ್ಯ ವ್ಯಾಖ್ಯಾನಕಾರರು ಬಳಸು ತ್ತಿದ್ದರು. ಡಬ್ಲ್ಯು. ಎಫ್. ಹೌವಾರ್ಡ್‌ರವರು ತಮ್ಮ "ಕ್ರಿಶ್ಚಿಯಾನಿಟಿ ಅಕಾರ್ಡಿಂಗ್ ಟು ಸೆಂಟ್ ಜಾನ್" (W. F. Howard's Christianity according to St. John) ಎಂಬ ಪುಸ್ತಕದಲ್ಲಿ ಯೆಹೂದ್ಯ ರಬ್ಬಿಗಳು "ಟೋರಾವನ್ನು" ಉಪಯೋಗಿಸುತ್ತಿದ್ದ ರೀತಿಯನ್ನು ಅವರ ಬರಹಗಳಲ್ಲಿ ತಿಳಿಸಿದ್ದಾರೆ.

> "ಭೂಮಿಯನ್ನು ಉಂಟು ಮಾಡುವುದಕ್ಕಿಂತ ಮುಂದೆ ಏಳು ವಸ್ತು ಗಳನ್ನು ಉಂಟು ಮಾಡಲಾಯಿತು.—ಅವು ಯಾವುವೆಂದರೆ—ಟೋರಾ, ಪಶ್ಚಾತ್ತಾಪ, ಏದೆನ್ ತೋಟ, ಗೆಹೆನ್ನ, ಮಹಿಮೆಯ ಸಿಂಹಾಸನ, ದೇವಾಲಯ, ಮೆಸ್ಸೀಯನ ಹೆಸರು."

"ಚೊಚ್ಚಲಾಗಿ ಹುಟ್ಟಿರುವುದರ ಮುಖಾಂತರ ದೇವರು ಆಕಾಶವನ್ನೂ ಭೂಮಿಯನ್ನೂ ಸೃಷ್ಟಿಸಿದನು. ಚೊಚ್ಚಲಾಗಿ ಹುಟ್ಟಿದ್ದು ಟೋರಾ ಅಲ್ಲದೆ ಬೇರೆ ಅಲ್ಲ."

ದೇವರು ತನ್ನ ಎಲ್ಲಾ ಕಾರ್ಯಗಳನ್ನೂ ಜ್ಞಾನದಿಂದಲೂ ನಿಯಮಗಳಿಗನುಸಾರವಾಗಿಯೂ ಮಾಡುತ್ತಾನೆಂದು ಹೇಳುವುದೇ ಈ ರೀತಿಯ ಭಾಷಾ ಶೈಲಿಯಾಗಿದೆ. ಆತನು ಭೂಲೋಕವನ್ನು ಬುದ್ಧಿವಂತಿಕೆಯಿಂದ ಸೃಷ್ಟಿಸುತ್ತಾನೆ. ಮಾನವ, ಅವನ ಆರಾಧನೆ ಹಾಗೂ ಅವನ ವಿಮೋಚನೆ ಇವೆಲ್ಲವೂ ದೈವೀಕಜ್ಞಾನದಲ್ಲಿ ಅನಾದಿಕಾಲದಿಂದಲೂ ರೂಪುಗೊಂಡ ನೀತಿಯ ಯೋಜನೆಯಿಂದ ಹೊರಬಂದವುಗಳಾಗಿವೆ.

## ಮಾತುಗಳು

ನಾವು ಮಾತನಾಡುವಾಗ ನಮ್ಮ ಆಂತರಿಕ ಗುಣಗಳನ್ನು ಪ್ರಕಟಪಡಿಸುತ್ತೇವೆ. ನಾವು ನಮ್ಮ ಗ್ರಹಿಕೆಗೂ ಮೀರಿ ಅಥವಾ ನಮ್ಮ ಗುಣಗಳಿಂದ ಹೊರತಾಗಿ ಮಾತನಾಡಲು ಪ್ರಯತ್ನಿಸಿದಲ್ಲಿ ನಮ್ಮ ನಿಜವಾದ ಅಂತರ್ಯಕ್ಕೆ ದ್ರೋಹವೆಸಗಿದಂತೆ ಆಗುತ್ತದೆ. ದೇವರ ವಾಕ್ಯಗಳು – ಹೋಲಿಕೆಯಲ್ಲಿ – ದೇವರು ಏನಾಗಿದ್ದಾನೋ ಅದನ್ನೇ ಪ್ರಕಟಿಸುವವುಗಳಾಗಿವೆ. ಆದ್ದರಿಂದ ಯೋಹಾನ 1:1 ರಲ್ಲಿ ....ದೇವರು ಏನಾಗಿದ್ದನೋ ವಾಕ್ಯವೂ ಅದೇ ಆಗಿತ್ತು. ಆದ್ದರಿಂದ ಯಾವಾಗ "ವಾಕ್ಯವು ಮಾಂಸವಾಯಿತು" (the Word became flesh) ಎಂದು ಹೇಳುವಾಗ, ದೇವರು ತನ್ನ ಯೋಜನೆಯಲ್ಲಿ (ವಾಕ್ಯದಲ್ಲಿ) ಮುಂದೆ ಒಬ್ಬ ಮಾನವನನ್ನು ಸೃಷ್ಟಿಸುವ ಆಲೋಚನೆಯನ್ನು ಹೊಂದಿದ್ದು, ಅದು ಕಾರ್ಯರೂಪಕ್ಕೆ ಬಂದಾಗ, "ಆ ವಾಕ್ಯವು (ದೇವರ ವಾಕ್ಯವು) ಮಾಂಸವಾಯಿತು" ಅಂದರೆ ಯೇಸುವು ಹುಟ್ಟಿದನು ಎಂದರ್ಥ. ಅನಾದಿಯಿಂದಲೂ ದೇವರು ತನ್ನ ಗುಣದಲ್ಲಿ, ಪ್ರೀತಿಯಲ್ಲಿ ಅನುಕಂಪದಲ್ಲಿ ಒಳ್ಳೆಯತನದಲ್ಲಿ ಏನಾಗಿದ್ದನೋ ಅದನ್ನೇ ನಜರೇತಿನ ಯೇಸುಕ್ರಿಸ್ತನ ವ್ಯಕ್ತಿತ್ವದಲ್ಲಿ ನಿಜವಾಗಿಯೂ ನೇರವಾಗಿಯೂ ಜನರಿಗೆ ತೋರ್ಪಡಿಸಿದನೆಂದು ಅರ್ಥ.

## ಸೃಷ್ಟಿಯ ದೇವರು :

ವಿಶ್ವದ ಅಗಾಧದಿಂದ ಮಾನವರು ಅಚ್ಚರಿಗೊಂಡಿದ್ದಾರೆ. ಅಂತರಿಕ್ಷದ ಜ್ಞಾನ ಹಾಗೂ ಲೆಕ್ಕವಿಲ್ಲದ ಕೋಟ್ಯಾಂತರ ಮೈಲಿಗಳಾಚೆ ಇರುವ ಕ್ರೂರ ಚಳಿಯನ್ನು ನೋಡಿದಾಗ ದೇವರು ನಮ್ಮಿಂದ ಬಹು ದೂರವಿದ್ದಾನೆ ಎಂದೆನಿಸುತ್ತದೆ. ನಮ್ಮ ಬಗ್ಗೆ ಆತನ ಆಲೋಚನೆಗಳೇನು ? ಆತನು ಉತ್ಪ್ರೇಕ್ಷೆಯಿಂದಿದ್ದಾನೆಯೋ ? ಆತನು ಸರಿಯಾದ ಸ್ಥಿತಿಯಲ್ಲಿದ್ದಾನೆಯೋ ? ಅದನ್ನು ಕಂಡುಹಿಡಿಯಲು ನಮಗೆ

ಎಂದಿಗೂ ಸಾಧ್ಯವಾಗಲಾರದೆಂದು ತೋರುತ್ತದೆ. ಇದಕ್ಕೆ ಉತ್ತರ ದೊರೆಯಬೇಕಾದಲ್ಲಿ ನಾವು ಕ್ರಿಸ್ತನ ಕಡೆಗೆ ನೋಡಬೇಕು. ಕ್ರಿಸ್ತನ ಜೀವಿತದಲ್ಲಿ ನಾವು ಸೃಷ್ಟಿಕರ್ತನ ನೈತಿಕ ಪ್ರಕೃತಿಯನ್ನು ಕಾಣುತ್ತೇವೆ ; ಮತ್ತು ಲೋಕದಲ್ಲಿನ ಕೆಟ್ಟತನ ನಮ್ಮನ್ನು ಎಷ್ಟೇ ಗಲಿಬಿಲಿಗೊಳಿಸಿದರೂ ಸಹ, ಸೃಷ್ಟಿಯು ಒಂದೆ ಪ್ರೀತಿಯು ಹಾಗೂ ಒಳ್ಳೆಯತನದ ಒಟ್ಟನಿದ್ದಾನೆ ಎಂಬದು ಅರಿವಾಗುತ್ತದೆ, ಏಸುಕ್ರಿಸ್ತನು ಎಲ್ಲವನ್ನೂ ಸೃಷ್ಟಿಸಿದ ದೇವರ ಪ್ರೀತಿ ಹಾಗೂ ಜ್ಞಾನದ ಮೂರ್ತಿಯಾಗಿದ್ದಾನೆ. ಕೊಲೊಸ್ಸೆ 1:15:17 ರಲ್ಲಿ ಪೌಲನು ಕ್ರಿಸ್ತನನ್ನು ಕೊಂಡಾಡಲು ಉಪಯೋಗಿಸಿರುವ ಮಾತುಗಳು ಅವನ ಕಾಲದ ಜನರು ಜ್ಞಾನದ ಬಗ್ಗೆ ಉಪಯೋಗಿಸುತ್ತಿದ್ದ ಮಾತುಗಳೇ ಆಗಿವೆ.

"ಆತನು (ಯೇಸುಕ್ರಿಸ್ತನು) ಅದೃಶ್ಯನಾದ ದೇವರ ಪ್ರತಿರೂಪನೂ ಸೃಷ್ಟಿಗೆಲ್ಲಾ ಜ್ಯೇಷ್ಠಪುತ್ರನ ಸ್ಥಾನ ಹೊಂದಿದವನೂ ಆಗಿದ್ದಾನೆ. ಭೂಪರಲೋಕಗಳಲ್ಲಿರುವ....ಆತನಲ್ಲಿ ಸೃಷ್ಟಿಸಲ್ಪಟ್ಟವು....ಆತನು ಎಲ್ಲಕ್ಕೂ ಮೊದಲು ಇದ್ದವನು, ಆತನು ಸಮಸ್ತಕ್ಕೂ ಆಧಾರಭೂತನು". ಪ್ರಾಚೀನ ಬರಹಗಾರರು "ವಾಕ್ಯ" "ಜ್ಞಾನ" "ಆತ್ಮ" ಮತ್ತು "ನೀತಿ" (ಧರ್ಮ) ಎಂಬ ಪದಗಳನ್ನು ಪರಲೋಕದಲ್ಲಿ ದೇವರೊಂದಿಗೆ ವಾಸಿಸುತ್ತಿರುವ ವ್ಯಕ್ತಿಗಳೋ ಎಂಬಂತೆ ಉಪಯೋಗಿಸುವಾಗ, ಅವರು ದೇವರ ಗುಣಗಳನ್ನು ಸಾಮಾನ್ಯ ವಿವರಣೆಗಿಂತ ಹೆಚ್ಚಾಗಿ ಅರ್ಥ ಕೊಡಲು ಉದ್ದೇಶಿಸಿದ್ದರು. ದೇವರು ಸೃಷ್ಟಿ ಕಾರ್ಯದಲ್ಲಿ ತೊಡಗಿದ್ದಾನೆಂದೂ ನ್ಯಾಯಬದ್ಧವಾದ ರೀತಿಯಲ್ಲಿ ಬುದ್ಧಿವಂತಿಕೆಯಿಂದ ಪಾಲಿಸುತ್ತಿದ್ದಾನೆಂದೂ ಹಾಗೂ ಅಂತಿಮವಾಗಿ ಎಲ್ಲರಿಗೂ ಒಳ್ಳೆಯದನ್ನೇ ಮಾಡುವಂಥವನೆಂದೂ ಉಪೇಕ್ಷೆಯಿಲ್ಲದವನಾಗಿ ಆತನಲ್ಲಿ ಭರವಸೆ ಇಡುವಂಥವನೂ ಆಗಿದ್ದಾನೆಂದೂ ಈ ಮಾತುಗಳು ತಿಳಿಯಪಡಿಸುತ್ತವೆ. ಈಗ ಯೇಸುಕ್ರಿಸ್ತನು ಹುಟ್ಟಿರುವುದರಿಂದ "ಜ್ಞಾನ" ಮತ್ತು "ವಾಕ್ಯ" ಎಂಬ ಪದಗಳಿಗೆ ಏನೆಲ್ಲಾ ಅರ್ಥವಿದೆಯೋ ಅವುಗಳನ್ನು ತನಗೆ ಅನ್ವಯಿಸಿಕೊಂಡು ಅವುಗಳು ಪ್ರತಿಯಾಗಿ "ಪುತ್ರತ್ವ"ದಲ್ಲಿ ಅಂಗೀಕೃತವಾಗಿದೆ. ಇಬ್ರಿಯ 1:3 ರಲ್ಲಿ "ಈತನು (ಯೇಸುಕ್ರಿಸ್ತನು) ದೇವರ ಪ್ರಭಾವದ ಪ್ರಕಾಶವೂ ಆತನ ತತ್ವದ ಮೂರ್ತಿಯೂ....ಆಗಿದ್ದು...." ಎಂದು ವಿವರಿಸಿದೆ. ಇಲ್ಲಿ ಯೆಹೂದ್ಯ ಬರಹಗಾರರು "ಮಗನಿಗೆ" ಸಂಬಂಧಿಸಿದ "ಜ್ಞಾನವು" ಲೋಕದ ಸೃಷ್ಟನೆಯಲ್ಲಿ "ಕಾರ್ಯಾಚರಣೆ" ನಡೆಸಿರುವುದರ ವಿವರಣೆಯನ್ನು ಕೊಟ್ಟಿದ್ದಾರೆ. ಇದರ ಸರಳ ಅರ್ಥವೇನೆಂದರೆ—ದೇವರು ಲೋಕವನ್ನು ಸೃಷ್ಟಿಸಲು ಉಪಯೋಗಿಸಿದ ನಿಯಮಗಳೇ ಕ್ರಿಸ್ತನ ಜೀವಿತದ ನೈತಿಕ ನಿಯಮಗಳಾಗಿವೆ.

**ಮಗನು**

"ದೇವರು ಯಾರನ್ನು ಕಳುಹಿಸಿದ್ದಾನೋ ಆತನಿಗೆ ಆತ್ಮವರವನ್ನು ಅಳತೆ ಮಾಡದೆ ಅನುಗ್ರಹಿಸಿರುವುದರಿಂದ (without measure) ಆತನು ದೇವರ

ಮಾತುಗಳನ್ನೇ ಆಡುತ್ತಾನೆ." (ಯೋಹಾನ 3:34 ಹಳೇ ಭಾಷಾಂತರ). ಆತ್ಮದ ಅದ್ಭುತ ಕಾರ್ಯವನ್ನು ಮನುಷ್ಯಕುಮಾರನೂ ದೇವಕುಮಾರನೂ ಆದ ನಜರೇತಿನ ಯೇಸುವಿನ ಪ್ರತ್ಯಕ್ಷತೆಯಲ್ಲಿ ಕಾಣಬಹುದಾಗಿದೆ)—"ನನ್ನನ್ನು ನೋಡಿದವನು ತಂದೆಯನ್ನು ನೋಡಿದ್ದಾನೆ" (ಯೋಹಾನ 14:9), ಇದನ್ನು ಕ್ರಿಸ್ತನಲ್ಲಿ ದೇವರು ಹೇಗೆ ನೆರವೇರಿಸಿದನೆಂದು ಗ್ರಹಿಸಲು ಅಸಾಧ್ಯವೆಂದು ನಾವು ಹೇಳದಿದ್ದರೂ ಅತಿ ಶ್ರೇಷ್ಠನೊಬ್ಬನು (ಮಾನವನಲ್ಲದವನು—ದೇವನು) ಮಾನವನಾಗಿ ಬಂದು ಮಾನವರ, ಮಿತಿಯಲ್ಲಿರುವುದು ಹೇಗೆ ಎಂಬುದು 5ನೇ ಶತಮಾನದಲ್ಲಿ ಎದ್ದ ಪ್ರಶ್ನೆಯಾಗಿತ್ತು. ಮಾನವನು ದೇವರ ಪ್ರತಿರೂಪದಲ್ಲಿ ಸೃಷ್ಟಿಸಲ್ಪಟ್ಟನು. ಆದುದರಿಂದ ಪರಿಪೂರ್ಣತೆಗೆ ತರಬಲ್ಲ ಎಲ್ಲಾ ನೈತಿಕ ಗುಣಗಳೂ ಅವನಲ್ಲಿ ಇವೆ. ಈ ಗುಣಗಳು ಏಕೈಕವಾಗಿಯೂ ಪರಿಪೂರ್ಣವಾಗಿಯೂ ಕ್ರಿಸ್ತನಲ್ಲಿದ್ದು, ಆತನು ದೇವರ ನಿಜವಾದ ಮಗನಾಗಿದ್ದಾನೆ.

ವಿಶ್ವಾಸ ಸೂತ್ರದಲ್ಲಿ (The Creed) "ಕ್ರಿಸ್ತನು" ಎಂಬ ಪದಕ್ಕೆ ಬದಲಾಗಿ "ಮಗನು" ಎಂಬ ಪದವನ್ನು ಉಪಯೋಗಿಸುವಾಗ "ಪುತ್ರತ್ವದ ಅರ್ಥವನ್ನೇ ಮುಸುಕುಗೊಳಿಸುವಂತೆ, ಮಗನನ್ನು ತಂದೆಯೊಂದಿಗೆ ಎಲ್ಲಾ ವಿಷಯಗಳಲ್ಲೂ ಸರಿಸಮಾನವಾಗಿ ಮಾಡಲಾಗಿದೆ. ಇದು ಸತ್ಯವೇದದ ಬೋಧನೆಗೆ" ತದ್ವಿರುದ್ಧವಾದುದಾಗಿದೆ. ಹೊಸ ಒಡಂಬಡಿಕೆಯಲ್ಲಿ ನಾವು ಏಸುವನ್ನು ಪುತ್ರತ್ವದ ಭಾವನೆಯಲ್ಲಿ ನೋಡಿದಾಗ ಆತನ ಬಗ್ಗೆ ತಾತ್ವಿಕ ವರ್ಗಗಳ ದೃಷ್ಟಿಯನ್ನು ತೊಡೆದುಹಾಕಬಹುದು. ದೇವರೊಂದಿಗಿನ ಆತನ (ಕ್ರಿಸ್ತನ) ಸ್ಥಾನವನ್ನು ನಾವು ಗಣನೆಗೆ ತೆಗೆದುಕೊಳ್ಳಬಹುದು. ಆದರೂ ಸಹ ಆತನನ್ನು "ಎಲ್ಲಾದರ ಮೇಲೆ ಕರ್ತನೆಂದು" ಅಂಗೀಕರಿಸಬಹುದಾಗಿದೆ. "ಎಲ್ಲಾ ವಿಷಯಗಳಲ್ಲಿ ತನ್ನ ಸಹೋದರರಂತೆ ಮಾಡಲ್ಪಟ್ಟನು." (ಇಬ್ರಿಯ 2:17). ಕ್ರಿಸ್ತನೊಂದಿಗೆ ನಾವು ಒಂದು ಸಂಬಂಧವನ್ನು ಅರಿಯಬಹುದಾಗಿದೆ. ಹಾಗೂ ಅದರಿಂದ ಉತ್ತೇಜನ ಹೊಂದಬಹುದಾಗಿದೆ. ದೇವರ ಏಕತೆಯು ಬೇರೆ ಯಾವುದಕ್ಕೂ ಹೊಂದಿಕೆ ಮಾಡಲಾಗದಂತಾದ್ದು. ಆದರೆ ಕ್ರಿಸ್ತನಲ್ಲಿ ಎಲ್ಲರೂ ಒಂದಾಗಿ, ಅಂತ್ಯದಲ್ಲಿ ಸಮಸ್ತದಲ್ಲಿಯೂ ಸಮಸ್ತನಾಗುವಂತೆ ಒಂದು ಮಾರ್ಗವು ನಮಗೆ ತೆರೆದಿದೆ.

"ಎಲ್ಲರಿಗೂ ತಂದೆಯಾಗಿರುವ ದೇವರು ಒಬ್ಬನೇ. ಆತನು ಎಲ್ಲರ ಮೇಲಿರುವವನೂ ಎಲ್ಲರ ಮುಖಾಂತರ ಕಾರ್ಯ ನಡೆಸುವವನೂ....ಆಗಿದ್ದಾನೆ." (ಎಫೆಸ. 4:6 ; 1 ಕೊರಿಂಥ 8:4–6)

—ಭಾ. ಚಂದುದಾಸ್